ಥಾಣೆ ಬಂಟ್ಸ್ ಎಸೋಸಿಯೇಶನ್‌ನ

# ಸ್ನೇಹ ಸೌರಭ

101, Jai Shankar CHS Ltd., Opp. Axis Bank, LBS Marg, Hari Niwas, Thane (W) - 400602.
Tel. 7506371586 e-mail : thanebunts@gmail.com Website : thanebunts.org

ಜನವರಿ - ಮಾರ್ಚ್ 2024 SNEHA SAURABHA JANUARY-MARCH 2024













ಅಮೃತೇಶ್ವರ ಇಂಗ್ಲಿಷ್ ಮೀಡಿಯಂ ಹೈಸ್ಕೂಲ್ ವಾಮಂಜೂರು ಇದರ ಹೊಸ ಹೈಸ್ಕೂಲ್ ಕಟ್ಟಡದ
ಉದ್ಘಾಟನೆ ಮತ್ತು ರಜತ ಮಹೋತ್ಸವ ಆಚರಣೆ



"ಸಾಧ್ಯವೇ ಇಲ್ಲ
ಎಂದುಕೊಂಡರೆ ಏನನ್ನೂ
ಸಾಧಿಸಲಾಗದು,
ಪ್ರಯತ್ನಿಸುವುದರಿಂದ
ನಷ್ಟವೇನಿದೆ. ಗೆದ್ದರೆ
ಸಂತೋಷವಾಗುತ್ತದೆ
ಸೋತರೆ ಅನುಭವ
ಸಿಗುತ್ತದೆ."

– ಸ್ವಾಮಿ ವಿವೇಕಾನಂದ


# ಸ್ನೇಹ ಸೌರಭ
# SNEHA SAURABHA

**ಥಾಣೆ ಬಂಟ್ಸ್ ಎಸೋಸಿಯೇಶನ್**

101, ಜೈಶಂಕರ್ ಕೋ. ಆಪರೇಟಿವ್ ಹೌಸಿಂಗ್ ಸೊಸ್ಯಾಟಿ ಲಿ.
ಆಕ್ಸಿಸ್ ಬ್ಯಾಂಕಿನ ಎದುರು, ಎಲ್.ಬಿ.ಎಸ್. ಮಾರ್ಗ, ಹರಿನಿವಾಸ,
ಥಾಣೆ (ಪ) - 400 602 • ಮೊಬೈಲ್ : 7506371586
e-mail : thanebunts@gmail.com / web : www.thanebunts.org

**ಸಂಪುಟ–16** | **ಜನವರಿ – ಮಾರ್ಚ್ 2024** | **ಸಂಚಿಕೆ–01**



**ಕಾರ್ಯಾಧ್ಯಕ್ಷರು**
ಸುರೇಶ್ ಶೆಟ್ಟಿ, ಕಡಂದಲೆ
**ಪ್ರಧಾನ ಸಂಪಾದಕರು**
ಡಾ. ಕರುಣಾಕರ್ ಶೆಟ್ಟಿ
**ಉಪ ಸಂಪಾದಕರು**
ಶ್ರೀಮತಿ ಪ್ರಮೋದ ಮಾಡ
**ಸಂಪಾದಕ ಮಂಡಳಿ**
ಕೇಶವ ಎಂ. ಆಳ್ವ
ಶರ್ಮಿಳಾ ಎಸ್. ಶೆಟ್ಟಿ
ಜ್ಯೋತಿ ಎನ್. ಶೆಟ್ಟಿ
**ಗೌರವ ಸಲಹೆಗಾರರು**
ಡಿ. ಜಿ. ಬೋಳಾರ್
ಭಾಸ್ಕರ ಎಂ. ಶೆಟ್ಟಿ
ಕುಶಲ್ ಸಿ. ಭಂಡಾರಿ
ವೇಣುಗೋಪಾಲ್ ಎಲ್. ಶೆಟ್ಟಿ
ಸುನೀಲ್ ಜೆ. ಶೆಟ್ಟಿ
**ಸಲಹೆ ಸಮಿತಿ**
ಸಿಎ ಕರುಣಾಕರ್ ಶೆಟ್ಟಿ
ಸಿಎ ಜಗದೀಶ್ ಶೆಟ್ಟಿ
ಚಂದ್ರಹಾಸ ಎಸ್. ಶೆಟ್ಟಿ
ಸುಲೋಚನಾ ಬಿ. ಶೆಟ್ಟಿ
ಆರತಿ ವೈ. ಶೆಟ್ಟಿ
ರೇವತಿ ಎಸ್. ಶೆಟ್ಟಿ
ಸುಮತಿ ಕೆ. ಶೆಟ್ಟಿ
ಕುಶಲ ಎನ್. ಶೆಟ್ಟಿ
**ಪ್ರಕಾಶಕರು**
ಚಂದ್ರಶೇಖರ ಎಸ್. ಶೆಟ್ಟಿ



**ಥಾಣೆ ಬಂಟ್ಸ್ ಎಸೋಸಿಯೇಶನ್**
101, ಜೈಶಂಕರ್ ಕೋ.ಆಪ್.ಹೌಸಿಂಗ್
ಸೊಸ್ಯಾಟಿ ಲಿ., ಆಕ್ಸಿಸ್ ಬ್ಯಾಂಕಿನ ಎದುರು,
ಎಲ್. ಬಿ. ಎಸ್. ಮಾರ್ಗ,
ಹರಿ ನಿವಾಸ, ಥಾಣೆ (ಪ) - 400 602.
ದೂರವಾಣಿ : 022 - 6561 6162
e-mail : thanebunts@gmail.com
web : www.thanebunts.org


**ಸ್ನೇಹ ಸಿಂಚನ :**


1. ಸಂಪಾದಕರ ನುಡಿ
2. ಕಾರುಣ್ಯಮೂರ್ತಿ ಶ್ರೀರಾಮ (ಕವನ)
3. ಸಾರಸಾಕ್ಷ ಬಾಲರಾಮ (ಕವನ)
4. From the Secretary's Desk
5. ಗುರುಗಳಾದ ಅಮೃತರು ಇನ್ನಿಲ್ಲ
6. ಯಾವ ಕಾಣಿಕೆ ಕೊಡಲಿ ನಿನಗೆ (ಭಾವಗೀತೆ)
7. ಮದುವೆ ಬಂಧವೋ, ಅನುಬಂಧವೋ?
8. ಜೈ ಶ್ರೀರಾಮ (ಕವನ)
9. ಶ್ರೀರಾಮ ಮಂದಿರ
10. ಬದುಕಿ ಬಿಡಬೇಕಿತ್ತು (ಕವನ)
11. ಜ್ಞಾನಯೋಗಿಯೆಂಬ ಮಹಾಜ್ಯೋತಿ...
12. ಬಾಳ ಹೊಂಗಿರಣ (ಕವನ)
13. ಶ್ರೀ ರಾಮ ಎಂದರೆ ಪಾವನಕೆ ಪಾವನ ಮಂಗಳಕೆ ಮಂಗಳ
14. ಗಝಲ್ (ಕವನ)
15. ನಿರಾಶ್ರಿತರಿಗೆ ಆಶ್ರಿತ ಖಾರ್‌ಘರ್ 'ಗಿರಿಜಾ ವೆಲ್ಫೇರ್ ಸೆಂಟರ್'
16. ಕಾವ್ಯ ತಪಸ್ವಿ ಹೆಬ್ರಿ (ಕವನ)


○○○

**ಮುಖ ಪುಟ**

**ಥಾಣೆ ಬಂಟ್ಸ್ ಅಸೋಸಿಯೇಶನ್ ಕಚೇರಿ ನವೀಕರಣಗೊಂಡ ಶುಭ ಸಂದರ್ಭದಲ್ಲಿ ನೆರವೇರಿದ ಶ್ರೀ ಸತ್ಯನಾರಾಯಣ ಮಹಾಪೂಜೆ**


(ಸ್ನೇಹ ಸೌರಭ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನದ ಅಭಿಪ್ರಾಯಗಳು ಆಯಾಯ ಲೇಖಕರಿಗೆ ಸಂಬಂಧಪಟ್ಟಿದ್ದು. ಪತ್ರಿಕೆ ಯಾವುದೇ ಜವಾಬ್ದಾರಿಗೆ ಹೊಣೆಯಲ್ಲ.)

## ಸಂಪಾದಕರ ನುಡಿ

# ದೇಶ ಮತ್ತು ದೇಶ ಪ್ರೇಮ

ದೇಶ ಮತ್ತು ದೇಶ ಪ್ರೇಮದ ಬಗ್ಗೆ ಚರ್ಚಿಸುವ ಮೊದಲು ನಾವು ದೇಶವೆಂದರೇನು ಈ ಬಗ್ಗೆ ತಿಳಿಯುವ ಅವಶ್ಯಕತೆ ಇದೆ. ನಾವು ಹುಟ್ಟಿದ ಸ್ಥಳ ಜಗತ್ತಿನ ಯಾವ ಭೂಪ್ರದೇಶಕ್ಕೆ ಸೇರಿದೆಯೋ ಅದನ್ನು ನಮ್ಮ ದೇಶವೆಂದು ನಾವು ಕರೆಯಬಹುದಾಗಿದೆ. ದೇಶವೆಂದು ಕರೆಯಲು ನಿರ್ದಿಷ್ಟ ಭೂಪ್ರದೇಶದಂತೆ ಅಲ್ಲಿ ಜನರು ಸ್ವಾತಂತ್ರ್ಯ ಹಾಗೂ ಅವರದ್ದೇ ಆದ ಸರಕಾರದ ಸಾರ್ವಭೌಮತ್ವ ಇರಬೇಕಾಗುತ್ತದೆ.

ಇರಲಿ, ಇನ್ನು ದೇಶ ಪ್ರೇಮದ ಬಗ್ಗೆ ಒಂದಿಷ್ಟು ವಿಚಾರ ಮಾಡೋಣ. ದೇಶಪ್ರೇಮ ವಿಷಯವೆನ್ನುವುದು ಇಂದು ನಿನ್ನೆ ಚಾಲ್ತಿಯಲ್ಲಿ ಬಂದಿರುವ ವಿಷಯವಲ್ಲ. ಇದರ ಕಲ್ಪನೆ ನಮ್ಮ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತದ ಕಾಲದಷ್ಟೇ ಪುರಾತನವಾದುದು. ರಾಮಾಯಣದ ಕಥಾನಾಯಕ ಪ್ರಭು ಶ್ರೀ ರಾಮಚಂದ್ರ ತನ್ನ ತಂದೆಯ ವಚನ ಪರಿಪಾಲನೆಗೋಸ್ಕರ ಹದಿನಾಲ್ಕು ವರ್ಷ ವನವಾಸ ತೆರಳಿದಾಗ ತನ್ನ ಮಾತೃಭೂಮಿ ಅಯೋಧ್ಯೆಯ ಒಂದು ಮುಷ್ಟಿ ಮಣ್ಣನ್ನು ತನ್ನ ಜೊತೆಗೆ ಕೊಂಡೊಯ್ದು ಪ್ರತಿದಿನ ಪ್ರಾತಃಕಾಲಕ್ಕೆದ್ದು ಶುಚಿರ್ಭೂತನಾಗಿ ಮೊಟ್ಟಮೊದಲು ಆ ಪವಿತ್ರ ಮಣ್ಣಿಗೆ ನಮಸ್ಕರಿಸಿದ ನಂತರವೇ ಇತರ ಕೆಲಸ ಕಾರ್ಯಗಳಿಗೆ ತೊಡಗುತ್ತಿದ್ದರಂತೆ. ಇನ್ನು ಮಹಾಭಾರತ ಯುದ್ಧ ನಡೆದದ್ದೇ ಕೌರವ ಪಾಂಡವರಿಗೆ ಒಂದು ಸೂಜಿ ಮೊನೆಯಷ್ಟೂ ಜಾಗ ಕೊಡಲಾರೆ ಎಂದ ಕಾರಣದಿಂದ. ಅಂದ ಮೇಲೆ ದೇಶಪ್ರೇಮದ ಪರಿಕಲ್ಪನೆ ಅಷ್ಟೇ ಹಳೆಯದು ಎಂದು ನಮಗೆ ತಿಳಿದುಬರುತ್ತದೆ.

ಭಾರತ ದೇಶವು ಪುರಾತನ ಕಾಲದಿಂದಲೂ ಸನಾತನ ಧರ್ಮವನ್ನು ಅನುಸರಿಸಿಕೊಂಡು ಬಂದಿರುವ ದೇಶ. ಭಾರತಕ್ಕೆ ದುಷ್ಯಂತ ಮತ್ತು ಶಾಕುಂತಲಾ ಅವರ ಪ್ರಿಯಪುತ್ರ ಭರತನಿಂದಾಗಿ ಭಾರತ ಎಂಬ ಹೆಸರು ಬಂದಿತೆಂದೂ ಅದೇ ರೀತಿ ಮೇಘಸ್ತನೀಸ್ ಎನ್ನುವ ಪ್ರವಾಸಿ ಇತಿಹಾಸಕಾರ ಮೌರ್ಯರ ಕಾಲದಲ್ಲಿ ಭಾರತದ ಭೇಟಿಯ ಸಮಯದಲ್ಲಿ ಸಿಂಧೂನದಿ ದಂಡೆಯ ಮೇಲಿರುವ ಪ್ರಾಂತ್ಯವನ್ನು ಇಂದು ಆಗಿ ಮುಂದೆ ಇದೇ ಇಂಡಸ್ ಅಥವಾ ಇಂಡಿಯಾ ಎಂದು ಕರೆದರು ಎನ್ನಲಾಗುತ್ತದೆ. ನಮ್ಮ ಭಾರತ ದೇಶ ತನ್ನಷ್ಟಕ್ಕೆ ಯಾರಿಗೂ ಉಪದ್ರ ಕೊಡದೆ ಇರುವ ನಾಡಾಗಿದ್ದು ಉಪದ್ರ ಕೊಟ್ಟವರನ್ನು ಸುಮ್ಮನೆ ಬಿಟ್ಟ ದೇಶವಲ್ಲ. ಆದರೆ ಮೊದಲು ನಮ್ಮ ದೇಶಕ್ಕೆ ಇಲ್ಲಿಯ ಸಂಪತ್ತು ದೋಚಲು ಬಂದ ಮುಸ್ಲಿಂ ರಾಜರು ನಂತರ ವ್ಯಾಪಾರಿಗಳ ಸೋಗಿನಲ್ಲಿ ಬಂದ ಬ್ರಿಟಿಷರು ಇಲ್ಲಿಯ ದೊರೆಗಳಾಗಿ ನಮ್ಮನ್ನೇ ಅಡಿಯಾಳಾಗಿಸಿದ್ದು, ಅದಕ್ಕೆ ನಮ್ಮವರೇ ಆದ ಕೆಲವು ದುಷ್ಟರು ಕಾರಣೀಭೂತರಾದದ್ದು ನಮ್ಮ ದುರ್ದೈವವೆನ್ನಬೇಕು.



ಇನ್ನು ದೇಶಭಕ್ತಿ ಅಥವಾ ದೇಶಪ್ರೇಮದ ಬಗ್ಗೆ ಮಾತನಾಡುವುದಾದರೆ ಅದಕ್ಕೆ ನಮ್ಮ ಸ್ವಾತಂತ್ರ್ಯ ಸಂಗ್ರಾಮಕ್ಕಿಂತ ಉತ್ತಮ ಉದಾಹರಣೆ ಮತ್ತೊಂದು ಸಿಗಲಾರದು. ಇಲ್ಲಿ ನಮಗೆ ಹೆಸರು ಗೊತ್ತಿರುವ ನೂರಾರು ಮಂದಿ ಬಲಿದಾನ ನೀಡಿದವರ ಜೊತೆ ಜೊತೆಗೆ ಎಷ್ಟೋ ಮಂದಿ ಅನಾಮಧೇಯರು ತಮ್ಮ ಸರ್ವಸ್ವವನ್ನೂ ಧಾರೆ ಎರೆದಿದ್ದಾರೆ. ಇದನ್ನು ದೇಶಪ್ರೇಮವೆಂದು ಯಾರಾದರೂ ಎದೆತಟ್ಟಿ ಹೇಳಬಹುದಾಗಿದೆ. ದೇಶಪ್ರೇಮವೆಂದರೆ ತನ್ನ ಮಾತೃಭೂಮಿಗಾಗಿ ತಮ್ಮ ಸರ್ವಸ್ವವನ್ನು ಪಣಕ್ಕಿಡಲು ತಯಾರಿರುವುದು ಮತ್ತು ಸಂದರ್ಭ ಬಂದಾಗ ಎಲ್ಲವನ್ನೂ ಸಮರ್ಪಣೆ ಮಾಡುವುದಾಗಿದೆ. ಮಾತೃಭೂಮಿ ಸ್ವರ್ಗಕ್ಕಿಂತಲೂ ಹಿರಿದಾದುದು ಎನ್ನುವ ಮಾತೊಂದಿದೆ. ಅಂದ ಮೇಲೆ ಸಂಗೊಳ್ಳಿ ರಾಯಣ್ಣ, ಭಗತ್ ಸಿಂಗ್, ಝಾನ್ಸಿ ರಾಣಿ ಲಕ್ಷ್ಮೀ ಬಾಯಿ, ಕಿತ್ತೂರು ಚೆನ್ನಮ್ಮ, ಅಹಲ್ಯಾ ಬಾಯಿ ಹೋಲ್ಕರ್ ಅಲ್ಲದೆ ಇನ್ನೆಷ್ಟೋ ಮಂದಿ ಅನಾಮಧೇಯರು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಮಾಡಿರುವ ತ್ಯಾಗ ಬಲಿದಾನವನ್ನು ನಾವು ದೇಶಪ್ರೇಮವೆಂದು ಕರೆಯಬಹುದಾಗಿದೆ. ದೇಶ ಮತ್ತು ದೇಶ ಪ್ರೇಮ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು. ತಮ್ಮ ಮಾತೃಭೂಮಿಯ ಬಗ್ಗೆ ಸರಿಯಾಗಿ ಅರಿತುಕೊಂಡವರು ಮಾತ್ರ ತಮ್ಮ ಮಾತೆಯನ್ನು ತಿಳಿದುಕೊಂಡಿರುವ ನಿಷ್ಠಾವಂತ ಮಕ್ಕಳಂತೆ ದೇಶವನ್ನೂ ಪ್ರೀತಿಸಬಲ್ಲರು. ನಿಜವಾಗಿಯೂ ಮಾನವನೆಂದ ಮೇಲೆ ಅವನಲ್ಲಿ ದೇಶಪ್ರೇಮ ಖಂಡಿತ ಇರಬೇಕು. ಏಕೆಂದರೆ ಮಾನವನಿಗೆ ಮಾತ್ರ ದೇವರು ಯೋಚಿಸುವ ಶಕ್ತಿಯನ್ನು ದಯಪಾಲಿಸಿದ್ದಾನೆ. ದೇಶಕ್ಕಾಗಿ ಸರ್ವಸ್ವವನ್ನೂ ಧಾರೆಯೆರೆಯಲು ತಯಾರಿರುವುದನ್ನು ನಾವು

ದೇಶಪ್ರೇಮವೆನ್ನಬಹುದಾಗಿದೆ. ನಮ್ಮ ಭಾರತ ದೇಶ ಹಿಂದಿನ ಕಾಲದಿಂದಲೂ ವಿಶ್ವಶಾಂತಿಯನ್ನು ಬಯಸುತ್ತಾ ಬಂದಿರುವ ದೇಶ. 'ಸರ್ವೇ ಜನಾ ಸುಖಿನೋ ಭವಂತು' ಎಂದು ವಿಶ್ವದ ಜನರಿಗೆಲ್ಲ ಕಲ್ಯಾಣ ಕೋರಿದ ದೇಶ. ಇಂತಹ ವಿಶ್ವ ಭ್ರಾತೃತ್ವ ಸಂಸ್ಕೃತಿ ಸಾರಿದ ಇನ್ನೊಂದು ದೇಶ ಈ ಭೂಮಿ ಮೇಲೆ ಇರಲಾರದು ಎನ್ನುವ ಮಾತಿನಲ್ಲಿ ಖಂಡಿತ ಉತ್ಪ್ರೇಕ್ಷೆ ಇರಲಾರದು.

**– ಡಾ. ಕರುಣಾಕರ್ ಎನ್. ಶೆಟ್ಟಿ, ಪಣಿಯೂರು**

ಕವನ

# ಕಾರುಣ್ಯಮೂರ್ತಿ ಶ್ರೀರಾಮ

## (ಏಳೆ ಛಂದಸ್ಸಿನಲ್ಲಿ)

**– ಪಾರ್ವತಿ ಶಾಸ್ತ್ರಿ, ಪುತ್ತೂರು**

ಇನಕುಲ ದೀಪಕ ಜನಕಜೆಯರ್ತಿಯ
ವನರುಹ ನೇತ್ರ ರಘುರಾಮ॥

ದಶರಥ ನಂದನ ದಶಮುಖ ಮರ್ದನ
ಕುಶಲವ ಪಿತನು ಶ್ರೀರಾಮ ॥

ದುಷ್ಟರ ಶಿಕ್ಷಿಸಿ ಶಿಷ್ಟರ ಪಾಲಿಸಿ
ಇಷ್ಟವನೀವ ಭಗವಂತ॥

ನೆನೆಯುವ ಭಕ್ತರ ಮನದಲಿ ನೆಲೆಸುವ
ಘನವಹ ಕೀರ್ತಿ ಗುಣವಂತ ॥

ಮಾರುತಿ ಹೃದಯದಿ ಶ್ರೀರಾಮನಿರುವನು
ಕಾರುಣ್ಯ ಮೂರ್ತಿ ರಘುವೀರ॥

ದೇವನ ಚರಣಕೆ ಸೇವೆಯು ಸಲಿಸಲು
ಪಾವನವಹುದು ನರಜನ್ಮ॥

ಅಗಣಿತ ಮಹಿಮಗೆ ನಗುಮೊಗದಾತಗೆ
ರಘುರಾಮ ನಿನಗೆ ಶರಣೆಂಬೆ॥

ಆರತಿಯೆತ್ತುತ ಚಾರುಚರಿತನಿಗೆ
ಶ್ರೀರಾಮಚಂದ್ರ ಜಯವೆಂಬೆ ॥

○○○

ಕವನ

# ಸಾರಸಾಕ್ಷ ಬಾಲರಾಮ

**– ಪಾರ್ವತಿ ಶಾಸ್ತ್ರಿ**

ಸುದಿನದಲಿ ಬಾಲರಾಮನ ಪ್ರತಿಷ್ಠೆಯ ಕಂಡು
ಹೃದಯ ತುಂಬಿದೆ ಭಾವಿಸುತ ಪೂಜಿಸಿ।
ಮುದಗೊಂಡು ರಾಮನಾಮದ ಪಾಯಸವ ಸವಿದೆ
ಸದನದೆದುರಲಿ ದೀಪಗಳ ಬೆಳಗಿಸಿ ॥

ಕೃಷ್ಣ ಶಿಲೆಯಲ್ಲರಳಿ ನಿಂತಿರುವ ಸೊಬಗಿನಲಿ
ವಿಷ್ಣುಪದ ದರ್ಶನದ ಸೌಭಾಗ್ಯವು।
ತೃಷ್ಣೆಯೆಲ್ಲವ ಕಳೆದು ಸಂತೃಪ್ತ ಭಾವದಲಿ
ಸೃಷ್ಟಿ ಪಾಲಕನನ್ನು ನುತಿಸುತಿಹೆವು॥

ಸಾರಸಾಕ್ಷನ ಮೊಗದಿ ಕೋಟಿಸೂರ್ಯರ ಕಾಂತಿ
ತೋರುವನು ಕೋದಂಡರಾಮನಾಗಿ।
ಹಾರಿ ಬಂದೆನು ಪ್ರಾಸಗಳ ಬೇಲಿ ದಾಟುತಲಿ
ಸಾರವನು ಕಾಣುತ್ತ ರಾಮಪದದಿ ॥

ಮನದಂಗಳದ ಭಾವಕುಸುಮಗಳ ನಾರಿಸುತ
ಪದಮಾಲೆ ಹೆಣೆದು ರಾಮಗೆ  ತೊಡಿಸಲೇ।
ಘನ ಮಹಿಮ ರಾಘವನ ವರ್ಣಿಸಲು ಸೋತಿರುವೆ
ಕಣ್ತುಂಬಿಕೊಂಡ ಪುಣ್ಯವದೆನ್ನಲೆ? ॥

ಜಗವೆಲ್ಲ ಬೆರಗಾಗಿ ನೋಡುತಿದೆ ಭಾರತವ
ಭಗವಂತ ಶ್ರೀರಾಮ ವಿಶ್ವದೊಡೆಯ
ರಗಳೆಗಳ ಪರಿಹರಿಸಿ ಮುನ್ನಡೆಸುವಾ ಶಕ್ತಿ
ಸುಗುಣಾತ್ಮಕನು ದಾಶರಥಿ ಚಿನ್ಮಯ॥

○○○

# From the Secretary's Desk

Dear Friends,

**"The tradition of the Raghu dynasty always upholds righteousness; a promise once made, even at the cost of one's life, must be fulfilled."**

This quote emphasizes the importance of honor, righteousness, and the fulfillment of promises, aligning with the cultural and religious sentiments we associate with the construction of the Ram Mandir in Ayodhya.

**I am glad to extend my hearty congratulations to our friend, Shri Praveen Bhoja Shetty on his election as the President of our Bunt Sangha Mumbai. I extend my best wishes to him and his team for success in all their future endeavors.**

On 21st January, 2024, Ram Rath Yatra was organised by Mulund Bunts Association under the leadership of **Trustee Shri. Dr. Satyaprakash Shetty, President Shri. B. Shantaram Shetty, Team Mulund Bunts and several devotees of Shri. Ram participated.** We too participated in this joyous event. There were bhajans and cultural programmes too and attended by all walks of life.

The Ayodhya Ram Janmabhoomi temple holds significant religious and cultural importance in Hinduism. It is believed to be the birthplace of Lord Rama, a revered deity in Hinduism.

**After years of legal battles, the Supreme Court of India, initiative by our Prime minister, Shri. Narendra Modiji and other senior leaders, in November 2019, ruled in favor of the construction of a Hindu temple at the disputed site.**

The construction of the Ram Mandir (temple) began in August 2020, and it symbolizes the fulfillment of a long-standing Hindu aspiration to have a grand temple dedicated to Lord Rama at his birthplace in Ayodhya. The temple complex is expected to be an architectural marvel and a pilgrimage site for millions of devotees. The construction and completion of the temple are significant events in the history of Ayodhya and India, reflecting both religious and cultural sentiments.

**On the auspicious occasion of prana pratisthapana held on 22nd January, 2024, we had Ganahoma and Satyanarayana Pooja at our newly renovated Thane Bunts Association office. Followed by Shri. Ram Bhajan and Annaprasada. Our president, founders, past presidents, office bearers, committee members, ladies wing, youth wing and many of our members attended this function.**



Our Thane Bunts Association is organizing a Turf cricket championship under the leadership of Sports chairman Shri.Santhosh Shetty to be held on 25th February, 2024, Sunday at Thane Turf Park, Gawande Baug, Thane West, with many prizes to be won. This championship and we will be expecting around 18+ teams from our various Bunts Association/Sangha. We look forward to the active participation for this sports event.

On Wednesday, 13th March 2024 from 2.00 pm onwards our Thane Bunts Association - 19th ANNUAL DAY CELEBRATION will be held at the "Dr. Kashinath Ghanekar Natya Griha ", Hiranandani Meadows, Pokhran Road No.2,Thane (West). The program schedule as informed will be cultural Programme, Skit, Stage Programme and a Drama.

We were primarily occupied with regular follow-up tasks throughout the renovation of the Thane Bunts Association office in this quarter, resulting in a limited number of activities.

**Republic Day celebrations,** the Office Bearers, Managing Committee Members, and number of members from the Ladies Wing and Youth Wing attended the Flag Hoisting functions held at our office premises at Thane.

I conclude by sharing my thoughts about communities which play a crucial role in fostering connection, support, and shared identity. The strength of a community lies in its ability to bring people together, provide a platform for collaboration, and create a sense of belonging. Successful communities require active participation, open communication, and a commitment to shared values. Building and sustaining a thriving community involves addressing diverse needs, fostering inclusivity, and adapting to change. Ultimately, communities serve as powerful spaces where individuals can learn, grow, and contribute to something greater than themselves.

Warm Regards

**Shri Chandrashekhar S. Shetty**
**Hon. Gen. Secretary**
**Thane Bunts Association**
cssbunts@gmail.com

# ಮುಂಬಯಿ ಚುಕ್ಕಿ ಸಂಕುಲದ ಆಶ್ರಯದಲ್ಲಿ 14 ಕೃತಿಗಳ ಬಿಡುಗಡೆ : ಆಧುನಿಕ ಯುಗದಲ್ಲಿ ಸಾಹಿತಿಗಳ ಜವಾಬ್ದಾರಿ ದೊಡ್ಡದು – ಚಂದ್ರಹಾಸ ಶೆಟ್ಟಿ





ಚುಕ್ಕಿಸಂಕುಲ ಆಯೋಜಿಸಿದ ಡಾ. ಕರುಣಾಕರ ಶೆಟ್ಟಿ ಪಣಿಯೂರು (10 ಕೃತಿಗಳು), ಪಾಂಗಾಳ ವಿಶ್ವನಾಥ ಶೆಟ್ಟಿ (3 ಕೃತಿಗಳು) ಹಾಗೂ ಶ್ರುತಿ ಅಭಿಷೇಕ್ ಶೆಟ್ಟಿ (1 ಕೃತಿ) ಇವರ ಒಟ್ಟು ಹದಿನಾಲ್ಕು ಕೃತಿಗಳು ಡಿಸೆಂಬರ್ 30ರಂದು ಥಾಣೆ ಪೂರ್ವದ ವುಡ್‌ಲ್ಯಾಂಡ್ ರಿಟ್ರೀಟ್‌ನಲ್ಲಿ ಬಿಡುಗಡೆಗೊಂಡವು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉದ್ಯಮಿ ಚಂದ್ರಹಾಸ್ ಶೆಟ್ಟಿ ವಹಿಸಿದ್ದರು. ಗೌರವ ಅತಿಥಿಗಳಾಗಿ ಆನಂದ್ ಶೆಟ್ಟಿ ಎಕ್ಕಾರು, ಡಿ. ಜಿ. ಬೋಳಾರ್ ಹಾಗೂ ನ್ಯಾಯವಾದಿ ಪದ್ಮನಾಭ ಶೆಟ್ಟಿ ಭಾಗವಹಿಸಿದ್ದರು.

ಮುಂಬೈಯಲ್ಲಿ ಒಂದೇ ವೇದಿಕೆಯಲ್ಲಿ ಹದಿನಾಲ್ಕು ಕೃತಿಗಳು ಮುಂಬೈ ಸಾಹಿತ್ಯ ಲೋಕಕ್ಕೆ ಒಂದು ಹೆಮ್ಮೆಯ ಸಂಗತಿ. ಕೃತಿಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ಚಂದ್ರಹಾಸ ಶೆಟ್ಟಿ ಅವರು ಸಾಹಿತ್ಯಲೋಕ ಒಂದು ಸುಂದರ ಲೋಕ. ಸಾಹಿತಿ ತನ್ನ ಅನುಭವವನ್ನು ಅಕ್ಷರ ರೂಪದಲ್ಲಿ ಲೋಕಕ್ಕೆ ಉಣಬಡಿಸುತ್ತಾನೆ. ಆಧುನಿಕ ಯುಗದಲ್ಲಿ ಸಾಹಿತಿಗಳ ಜವಾಬ್ದಾರಿ ದೊಡ್ಡದು ಎಂದು ಅಭಿಪ್ರಾಯಪಟ್ಟರು. ಕವಿಗಳು ಸಮಾಜವನ್ನು ಸುಧಾರಿಸುವವರು ಎಂಬ ಅನಿಸಿಕೆಯನ್ನು ಡಿ. ಜಿ. ಬೋಳಾರ್ ಅವರು ಹಂಚಿಕೊಂಡರು. ಆನಂದ ಶೆಟ್ಟಿ ಅವರು ಮಾತನಾಡುತ್ತಾ ಕವಿಗಳು ಮತ್ತು ಸಾಹಿತಿಗಳು ಸಜ್ಜನರು. ಸಮಾಜಕ್ಕೆ ಅವರ ಅಗತ್ಯ ತುಂಬಾ ಇದೆ ಎಂಬ ಆಶಯವನ್ನು ವ್ಯಕ್ತಪಡಿಸಿದರು. ನ್ಯಾಯವಾದಿ ಪದ್ಮನಾಭ ಶೆಟ್ಟಿ ಮಾತನಾಡುತ್ತಾ ಇಂದು ಲೋಕಾರ್ಪಣೆಗೊಂಡ ಸಾಹಿತಿಗಳ ಕೃತಿ ವಿಶ್ವವ್ಯಾಪಿಯಾಗಲಿ ಎಂದು ಹಾರೈಸಿದರು.

ಇದೇ ಸಂದರ್ಭದಲ್ಲಿ ಲೋಕಾರ್ಪಣೆಗೊಂಡ ಹದಿನಾಲ್ಕು ಕೃತಿಗಳ ಪರಿಚಯವನ್ನು ಮಾಡಿಕೊಡಲಾಯಿತು. ಡಾ. ಜಿ. ಪಿ. ಕುಸುಮ ಅವರು ಬೋಗನ್‌ವಿಲ್ಲಾ, ಬಾಳೊಂದು ಉಯ್ಯಾಲೆ ಹಾಗೂ ಓದಿದ್ದು ಹೋಳಿದದ್ದು ಈ ಕೃತಿಗಳನ್ನು ಪರಿಚಯಿಸಿದರು. ಅಶೋಕ್ ವಳದೂರು ಮಣ್ಣಿನ ಕರೆ ಹಾಗೂ ದೂರದ ಬೆಟ್ಟ ಕೃತಿಗಳ ಸಾರವನ್ನು ತಿಳಿಸಿದರು. ಡಾ. ದಾಕ್ಷಾಯಿಣಿ ಯಡಹಳ್ಳಿ ಕಾರಂತ ಪ್ರೇಮ್‌ಚಂದ್ ಅನುಸಂಧಾನ, ವಿಚಾರ ವಿಮರ್ಶೆ - 4 ಹಾಗೂ ಅನಾವರಣ ಈ ಕೃತಿಗಳ ಒಳನೋಟಗಳನ್ನು ತೆರೆದಿಟ್ಟರು. ಸವಿತಾ ಶೆಟ್ಟಿ ಅವರು ಸಾವಿರ ನೆನಪಿನ ಗೂಡು ಈ ಕೃತಿಯನ್ನು ಪರಿಚಯಿಸಿದರು. ಲತಾ ಸಂತೋಷ್ ಶೆಟ್ಟಿ ಮಾತು ಮುತ್ತಾದಾಗ ಹಾಗೂ ಧರೆಗಿಳಿದ ಸೂರ್ಯ ಕೃತಿಗಳನ್ನು ಪರಿಚಯಿಸಿದರು. ಮಹೇಶ್ ಹೆಗ್ಡೆ ಅವರು Life Tools, ಪಾಂಗಾಳದ ಪಿಂಗಾರ ಹಾಗೂ ಪ್ರದೀಪ ಅನಾವರಣ ಕೃತಿಗಳ ಒಳನೋಟವನ್ನು ಪ್ರಸ್ತುತಪಡಿಸಿದರು.

ಕೃತಿಕಾರರಾದ ಡಾ. ಕರುಣಾಕರ ಶೆಟ್ಟಿ ಪಣಿಯೂರು ಮಾತನಾಡುತ್ತಾ ತನಗೆ ಸಾಹಿತ್ಯ ಕ್ಷೇತ್ರದಲ್ಲಿ ನೆರವಾದವರನ್ನು ನೆನಪಿಸಿದರು ಹಾಗೂ ಹತ್ತು ಕೃತಿಗಳನ್ನು ಲೋಕಾರ್ಪಣೆಗೊಳಿಸಲು ಸಹಕರಿಸಿದ ಎಲ್ಲರನ್ನು ನೆನಪಿಸಿ ಅವರಿಗೆ ವಂದನೆಗಳನ್ನು ಸಲ್ಲಿಸಿದರು. ಕೃತಿಕಾರ ಪಾಂಗಾಳ ವಿಶ್ವನಾಥ ಶೆಟ್ಟಿ ಮಾತನಾಡಿ ಆಧುನಿಕ ವಾಟ್ಸಪ್ ಯುಗದಲ್ಲಿ ಪುಸ್ತಕಗಳನ್ನು ಓದುವುದು ಇನ್ನೂ ಹೆಚ್ಚಾಗಬೇಕು. ತಮ್ಮ ಕೃತಿಗಳನ್ನು ಓದಿ ಮೆಚ್ಚುಗೆ ಗಳಿಸಿದ ಎಲ್ಲರನ್ನು ನೆನೆದು ಅವರಿಗೆ ವಂದನೆಯನ್ನು ಸಲ್ಲಿಸಿದರು. ಇಂಗ್ಲಿಷ್ ಕಾದಂಬರಿಕಾರರಾದ ಶ್ರುತಿ ಅಭಿಷೇಕ್ ಶೆಟ್ಟಿ ಮಾತನಾಡಿ ತನ್ನ ಕಾದಂಬರಿಯ ಕೆಲವು ಸಾಲುಗಳನ್ನು ವಾಚಿಸಿದರು. ಕೃತಿ ಲೋಕಾರ್ಪಣೆಯ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಕವಿ ನಾಟಕಕಾರ ಸಾ. ದಯಾ ನಿರೂಪಿಸಿ, ವಂದಿಸಿದರು.

ಇದೇ ಸಂದರ್ಭದಲ್ಲಿ ನಡೆದ ಕವಿಗೋಷ್ಠಿಯಲ್ಲಿ ಉದಯೋನ್ಮುಖ ಕವಿಗಳು ಭಾಗವಹಿಸಿ ಸಾಹಿತ್ಯ ಸಂಜೆಯ ಮೆರುಗನ್ನು ಹೆಚ್ಚಿಸಿದರು. ಕವಿ ಸುಧಾಕರ್ ಆಲೂರ್ 'ಆಯುಷ್ಯ' ಕವಿತೆಯನ್ನು ವಾಚಿಸಿದರು. ಹರಿಣಿ ಶೆಟ್ಟಿಯವರು 'ಬಾಲೆ ಕೃಷ್ಣ' ಎಂಬ ತುಳು ಕವಿತೆಯನ್ನು, ಕೆ. ಎನ್. ಸತೀಶ್ 'ನಾವು ಭಾರತೀಯರು' ಕವಿತೆಯನ್ನು, ದೀಪ ಹರೀಶ್ ಶೆಟ್ಟಿ ಅವರು 'ಕವಿತೆ ಎಂದರೆ' ಎಂಬ ಕವಿತೆಯನ್ನು, ರಜನಿ ತೋಳಾರ್ 'ಹೊಸ ವರ್ಷ' ಕವಿತೆಯನ್ನು, ಸೋಮನಾಥ್ ಕರ್ಕೇರ ಅವರು 'ತಮ್ಮ ಚುಟುಕು ಸನ್ಮಾನ' ಹಾಗೂ ಇತರ ಚಟಾಕಿಗಳನ್ನು ಪ್ರಸ್ತುತಪಡಿಸಿ ಪ್ರೇಕ್ಷಕರಲ್ಲಿ ನಗೆ ಚಿಮ್ಮಿಸಿದರು. ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಕರುಣಾಕರ್ ಶೆಟ್ಟಿ ಪಣಿಯೂರು ವಹಿಸಿದ್ದರು. ತಮ್ಮ ಅಧ್ಯಕ್ಷೀಯ ಮಾತಿನಲ್ಲಿ ಅರ್ಥಪೂರ್ಣವಾದ ಕವಿತೆಗಳನ್ನು ಸಾದಪಡಿಸಿದರು. ಹೆಚ್ಚಿನವರು ಉದಯೋನ್ಮುಖ ಕವಿಗಳು ಎನ್ನುತ್ತಾ ಅವರ ಮುಂದಿನ ಕಾವ್ಯದಾರಿಗೆ ಶುಭವನ್ನು ಹಾರೈಸಿದರು ಹಾಗೂ ತನ್ನ ತುಳು ಕವಿತೆ 'ನೂದು ವರ್ಷ ಬದುಕುಲ' ವನ್ನು ಪ್ರಸ್ತುತಪಡಿಸಿ, ಭಾಗವಹಿಸಿದ ಎಲ್ಲಾ ಕವಿಗಳಿಗೆ ಕೃತಜ್ಞತೆಯನ್ನು ಅರ್ಪಿಸಿದರು. ಕವಿಗೋಷ್ಠಿಯನ್ನು ಕವಿ ಗೋಪಾಲ್ ತ್ರಾಸಿಯವರು ನಿರೂಪಿಸಿ, ವಂದಿಸಿದರು.

# ಗುರುಗಳಾದ ಅಮೃತರು ಇನ್ನಿಲ್ಲ

✍ ಡಾ. ಪುರುಷೋತ್ತಮ ಬಿಳಿಮಲೆ

ಕಳೆದ ನವಂಬರ ತಿಂಗಳಲ್ಲಿ ಗುರುಗಳಾದ ಅಮೃತ ಸೋಮೇಶ್ವರರನ್ನು ಅವರ ಮನೆಯಲ್ಲಿ ಕಂಡು ಮಾತಾಡಿಸಿ ಬಂದಿದ್ದೆ. ಹಾಸಿಗೆಯಲ್ಲಿ ಮಲಗಿದ್ದ ಅವರು ನನ್ನ ಕಂಡೊಡನೆ ಮುಗುಳ್ನಕ್ಕು ಕೈಯನ್ನು ಸುಮಾರು ಅರ್ಧಗಂಟೆಯವರೆಗೆ ಗಟ್ಟಿಯಾಗಿ ಹಿಡಿದುಕೊಂಡಿದ್ದರು. ನಾವು ಮಾತಾಡುತ್ತಿದ್ದುದಕ್ಕೆಲ್ಲ ಸಣ್ಣದಾಗಿ ಪ್ರತಿಕ್ರಿಯಿಸುತ್ತಿದ್ದರು. ಅಮೃತರೇ ಹಾಗೆ, ತನ್ನ ಸುತ್ತ ನಡೆಯುತ್ತಿದ್ದ ಯಾವುದೇ ಘಟನೆಗಳಿಗೆ ತನ್ನದೇ ರೀತಿಯಲ್ಲಿ ಪ್ರತಿಕ್ರಿಯಿಸುತ್ತಲೇ ಇದ್ದರು. ಇನ್ನು ನಾವದನ್ನು ಕಾಣಲಾರೆವು.

ನಿಜವಾದ ಅರ್ಥದಲ್ಲಿ ಅವರು ನನ್ನ ಗುರುಗಳು. ಹಳಗನ್ನಡ, ನಡುಗನ್ನಡ, ಹೊಸಗನ್ನಡ, ತುಳುಭಾಷೆ, ಯಕ್ಷಗಾನ, ಹರಿಕತೆ, ನಾಟಕ, ಸಂಘಟನೆ, ಪ್ರೀತಿ, ವಾತ್ಸಲ್ಯ, ಪ್ರೇಮ, ಕಡಲು, ಮೀನು, ಭಗವತಿಗಳು, ಭಾಷಣ, ಪಯಣ, ಕ್ಷೇತ್ರಕಾರ್ಯ, ಶೋಷಣೆ, ತಮಾಷೆ... ಹೀಗೆ ಅವರಿಂದ ಕಲಿತದ್ದು ಅಪಾರ. ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ಐಚ್ಛಿಕ ಕನ್ನಡದ ವಿದ್ಯಾರ್ಥಿಗಳಾದ ನಮ್ಮನ್ನು ಅವರು ವಾರಾಂತ್ಯದಲ್ಲಿ ಪುತ್ತೂರಿನಿಂದ ಅವರ ಮನೆಯಿದ್ದ ಕೋಟೆಕಾರಿಗೆ ಕರೆದುಕೊಂಡು ಹೋಗುತ್ತಿದ್ದರು. ಮಧ್ಯಾಹ್ನದ ಊಟ ಅವರ ಮನೆಯಲ್ಲಿ. ಸಾಯಂಕಾಲ ಅವರೊಂದಿಗೆ ಸೋಮೇಶ್ವರದ ಕಡಲತೀರಕ್ಕೆ. ಅಲ್ಲಿ ಕಡಲಿನೊಳಗೆ ಚಾಚಿಯೂ ಚಾಚದಂತೆ ತಲೆಎತ್ತಿ ನಿಂತಿರುವ ರುದ್ರಶಿಲೆಯ ಮೇಲೆ ನಮ್ಮ ಚೌಕಟ್ಟುಗಳಿಲ್ಲದ ಪಟ್ಟಾಂಗ. ಅಮೃತರ ಕವನ ಸಂಕಲನಗಳಾದ ವನಮಾಲೆ ಮತ್ತು ಭ್ರಮಣಗಳನ್ನು ನಾವಾಗಲೇ ಓದಿದ್ದು. ಸಣ್ಣಕತೆಗಳ ಸಂಕಲನ ಎಲೆಗಿಲಿ ಮತ್ತು ರುದ್ರಶಿಲೆ ಸಾಕ್ಷಿಗಳನ್ನು ನಾವು ಹಲವರು ಓದಿದ್ದು ರುದ್ರ ಶಿಲೆಯ ಮೇಲೆಯೇ. ತರಗತಿಯ ಒಳಗೆ ಸಾಹಿತ್ಯದ ಪಠ್ಯಗಳನ್ನು ಬಗೆದು ತೋರಿಸುವ ಅವರು ಹೊರಗಡೆಗೆ ಜಾನಪದದ ಬಗೆಗೆ ಹೆಚ್ಚು ಒತ್ತು ನೀಡುತ್ತಿದ್ದರು. ಇದರಿಂದಾಗಿ ನಮಗೆ ಸಂಸ್ಕೃತಿಯ ಭಿನ್ನ ಮುಖಗಳ ದರ್ಶನವಾಗುತ್ತಿತ್ತು. ನಾವೆಲ್ಲಾ ತುಳುನಾಡಿನ ನಿವಾಸಿಗಳೇ ಹೌದಾದರೂ ನಮ್ಮ ಕಣ್ಣಿಗೆ ಬೀಳದ ಅನೇಕ ಸಂಗತಿಗಳನ್ನು ಅವರು ಆಗಾಗ ತೆರೆದು ತೋರಿಸುತ್ತಲೇ ಬರುತ್ತಿದ್ದರು. ಕಲ್ಕುಡ ಪಾಡ್ದನವನ್ನು ಆಧರಿಸಿ ವೀರ ಕಲ್ಕುಡ ಎಂಬ ನಾಟಕವನ್ನು ಅವರು ಬರೆದು, ನಾನು ಅದರಲ್ಲಿ ಪಾತ್ರ ಮಾಡುವಂತೆ ಪ್ರಚೋದಿಸಿದ್ದರು. ಕಾಲೇಜಿನ ವಾರ್ಷಿಕೋತ್ಸವಕ್ಕೆ ತರಬೇತಿ ನೀಡಿ ಯಕ್ಷಗಾನ ಮಾಡಿಸಿದ್ದರು. ಪಂಜೆ ಮಂಗೇಶರಾಯ, ಗೋವಿಂದ ಪೈ, ಕಡೆಂಗೋಡ್ಲು ಶಂಕರ ಭಟ್ಟ, ಸೇಡಿಯಾಪು ಕೃಷ್ಣ ಭಟ್ಟ, ಮುಳಿಯ ತಿಮ್ಮಪ್ಪಯ್ಯ, ಪಾರ್ತಿಸುಬ್ಬ, ಶಿವರಾಮ ಕಾರಂತ ಮೊದಲಾದವರ ಬಗ್ಗೆ ನನಗೆ ಪ್ರಾಥಮಿಕ ತಿಳುವಳಿಕೆ ದೊರೆತದ್ದು ಪುತ್ತೂರಿನಲ್ಲಿದ್ದ ಅಮೃತರ ಪುಟ್ಟ ಕೊಠಡಿಯಲ್ಲಿ.

1970ರ ದಶಕದ ಕೊನೆಯ ಹೊತ್ತಿಗೆ ಯಕ್ಷಗಾನ ಕ್ಷೇತ್ರವು ತನ್ನ ಸಾಧ್ಯತೆಗಳನ್ನೆಲ್ಲಾ ತೀರಿಸಿಕೊಂಡು ಜಡವಾಗುತ್ತಿರುವ ಹೊತ್ತಿಗೆ ಎರಡು ಘಟನೆಗಳು ಒಟ್ಟೊಟ್ಟಾಗಿ ಸಂಭವಿಸಿದವು. ಮೊದಲನೆಯದು ತುಳು-ಯಕ್ಷಗಾನಗಳ ಉಗಮ ಮತ್ತು ಎರಡನೆಯದು ಪಾರಂಪರಿಕ ಯಕ್ಷಗಾನಕ್ಕೆ ಮರುಜೀವ ಕೊಡುವ ಪ್ರಯತ್ನ. ಈ ಎರಡೂ ಘಟನೆಗಳ ಮುಂಚೂಣಿಯಲ್ಲಿ ಅಮೃತ ಸೋಮೇಶ್ವರರು ಇದ್ದರೆಂಬುದು ಗಮನಾರ್ಹ ವಿಚಾರವಾಗಿದೆ. ಕನ್ನಡ ಯಕ್ಷಗಾನವು ತುಳುವಿನ ಕಡೆಗೆ ಹೊರಳಿಕೊಳ್ಳುವ ಸ್ಥಿತ್ಯಂತರದ ಕಾಲಘಟ್ಟದಲ್ಲಿ ಅಮೃತರು ಕನ್ನಡದಲ್ಲಿ ಆರಂಭವಾಗಿ ತುಳುವಿನಲ್ಲಿ ಮುಕ್ತಾಯವಾಗುವ ಅಮರಶಿಲ್ಪಿ ವೀರಕಲ್ಕುಡ ಪ್ರಸಂಗವನ್ನು ಬರೆದರು. ವೈದಿಕ ಪುರಾಣದ ಕತೆಯೊಂದನ್ನು ತುಳು ಸಂಸ್ಕೃತಿಗೆ ಜೋಡಿಸಿದ ಈ ಪ್ರಸಂಗವನ್ನು ಅಗರಿ, ಶೇಣಿ, ಸಾಮಗ, ಮೊದಲಾದ ಅಗಾಧ ಪ್ರತಿಭೆಯ ಕಲಾವಿದರುಗಳಿದ್ದ ಸುರತ್ಕಲ್ ಮೇಳದ ಕಲಾವಿದರು ಅದ್ಭುತವಾಗಿ ಪ್ರದರ್ಶಿಸಿದ್ದರು. ಮುಂದೆ ಅಮೃತರು ಧರ್ಮಸ್ಥಳ ಮೇಳಕ್ಕೆ ಸಹಸ್ರ ಕವಚಮೋಕ್ಷ, ಕಾಯಕಲ್ಪ, ಮಹಾಶೂರ ಭೌಮಾಸುರ, ಮಹಾಕಲಿ ಮಗಧೇಂದ್ರ, ತ್ರಿಪುರ ಮಥನ, ಗಂಗಾವತರಣ, ವಂಶವಾಹಿನಿ, ಮೊದಲಾದ ಅತ್ಯದ್ಭುತ ಪ್ರಸಂಗಗಳನ್ನು ಬರೆದರು. ನನ್ನ ಪ್ರಕಾರ ಅದು ಯಕ್ಷಗಾನದ ಸುವರ್ಣಯುಗ. ಈ ಪ್ರಸಂಗಗಳ ವಸ್ತು ಪೌರಾಣಿಕವಾಗಿದ್ದರೂ ಅದು ರಂಗದಲ್ಲಿ ಕಾಣಿಸಿಕೊಂಡಾಗ

ಅತ್ಯಾಧುನಿಕವಾದ ಅನುಭವಗಳನ್ನು ಕೊಡುತ್ತಿತ್ತು. ಗಿರೀಶ್ ಕಾರ್ನಾಡರ ನಾಟಕಗಳು ನೀಡುತ್ತಿದ್ದ ರೋಮಾಂಚನವನ್ನು ಕರ್ಣ, ಅಶ್ವಿನಿ ದೇವತೆಗಳು, ಚಾರ್ವಾಕ, ಭೌಮಾಸುರ, ಭಗೀರಥ, ಮಗಧ ಮೊದಲಾದ ಪಾತ್ರಗಳೂ ನೀಡುತ್ತಿದ್ದುವು. ಕಳೆಗುಂದುತ್ತಿದ್ದ ಪೌರಾಣಿಕ ಯಕ್ಷಗಾನಗಳಿಗೆ ಹೊಸಜೀವ ಕೊಟ್ಟವರಲ್ಲಿ ಅಮೃತರು ಪ್ರಮುಖರು. 'ಅಮೃತರ ಹಾಗೆ ಪದ್ಯ ಬರೆದರೆ ನಮಗೆ ಹಾಡಲೂ ಖುಷಿಯಾಗುತ್ತದೆ' ಎಂದು ಕಡತೋಕರು ಒಮ್ಮೆ ನನ್ನೊಡನೆ ಹೇಳಿದ್ದರು. ಭಾಷೆ, ಕಥನತಂತ್ರ, ವಸ್ತುವಿನ ಆಧುನಿಕತೆ ಮತ್ತು ಬಳಸುವ ಉಪಮೆ - ರೂಪಕಗಳು ಅಮೃತರನ್ನು ಆಧುನಿಕ ಪಾರ್ತಿಸುಬ್ಬ ಎಂಬ ಬಿರುದಿಗೆ ಅನ್ವರ್ಥಕಗೊಳಿಸಿದುವು. ಕನ್ನಡ ಸಾಹಿತ್ಯದ ವಿಸ್ತಾರವಾದ ಓದು ಅಮೃತರನ್ನು ಇತರ ಪ್ರಸಂಗಕರ್ತರಿಂದ ಬೇರೆಯಾಗಿಸಿತು.

ನಾಲ್ಕು ಸಣ್ಣಕಥಾ ಸಂಕಲನಗಳು, ಐದು ಕವನ ಸಂಕಲನಗಳು, ಒಂದು ಕಾದಂಬರಿ, 13 ನಾಟಕಗಳು, 9 ನೃತ್ಯರೂಪಕಗಳು, ಎರಡು ವ್ಯಕ್ತಿಚಿತ್ರಗಳು, ಎರಡು ಪಾಡ್ದನ ಸಂಕಲನಗಳು, 12 ಸಂಶೋಧನಾ ಕೃತಿಗಳು, ಎಂಟು ಸಂಪಾದಿತ ಕೃತಿಗಳು, 22 ಯಕ್ಷಗಾನ ಪ್ರಸಂಗಗಳು, 20ಕ್ಕೂ ಹೆಚ್ಚು ಧ್ವನಿಸುರುಳಿಗಳು ಇತ್ಯಾದಿಗಳನ್ನು ಅವರು ನಮಗೆ ಬಿಟ್ಟು ತೆರಳಿದ್ದಾರೆ. ನನ್ನ ಕಾಗೆ ಮುಟ್ಟಿದ ನೀರು ಕೃತಿಯನ್ನು ಸಂಸಾರ ಸಮೇತ ಸಂಭ್ರಮಿಸಿದ್ದನ್ನು ಕಾಣಬಹುದು. ಇಂಥ ಮನಸ್ಸುಗಳು ಈಗೆಲ್ಲಿ? ❍

ಹನಿಗವನ

## ಸಹಕಾರ

**- ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ**

ಮಾಡಿ ಅಥವಾ ಮಾಡದಿರಿ
ಲವಲವಿಕೆಯಿಂದಿರಲು
ಯೋಗ
ಅವಶ್ಯವಿದ್ದಲ್ಲಿ ಮರೆಯದಿರಿ
ಪರಸ್ಪರ ನೀಡಲು
ಸಹಯೋಗ! ❍

ಭಾವಗೀತೆ

## ಯಾವ ಕಾಣಿಕೆ ಕೊಡಲಿ ನಿನಗೆ

**- ಚನ್ನಬಸಪ್ಪ ರೊಟ್ಟಿ, ನೇಸರಗಿ**

ಯಾವ ಕಾಣಿಕೆ ಕೊಡಲಿ ನಿನಗೆ ನಾನಿಂದು?
ಓ ನನ್ನ ಪ್ರಿಯನಾಡೆ ಜನ್ಮದಿನವೆಂದು

ಮಲೆನಾಡ ಕಣಿವೆಗಳ ಹಸಿರು ಮೌನದೊಳಿರುವ
ನಿನಗಾಗಿ ನಾನೊಂದು ಗಿಳಿಯ ತರಲೆ?
ಸಾಗರದ ಅಲೆಗಳಲಿ ಉಯ್ಯಾಲೆಯಾಡಿರುವ
ನಿನಗೆ ಕಾಮನಬಿಲ್ಲು ಬಲೆಯ ಕೊಡಲೆ?।।

ಹಲವು ಹೊಳೆಗಳ ಜೊತೆಗೆ ಸ್ವರವೆತ್ತಿ ಪಾಡಿರುವ
ನಿನಗೆ ಮಂದಾನಿಲದ ವೀಣೆ ತರಲೆ ?
ಮುತ್ತಿನ ತೆನೆಯಿತ್ತು ಮಮತೆಯಲಿ ಸಲಹಿರುವ
ನಿನಗೆ ಕಲ್ಪವೃಕ್ಷ ಸಸಿಯ ನೆಡಲೆ?।।

ಹಲವು ಲಾಂಛನ ಹೊತ್ತು ಅರಸುಕುಲ ಮೆರೆಸಿರುವ
ನಿನಗಾಗಿ ಪಲ್ಲಕ್ಕಿಯೊಂದು ತರಲೆ?
ಮಣ್ಣಿನಲಿ ನೀರಿನಲಿ ಬದುಕು ಬೆಳಕನು ಕೊಟ್ಟ
ನಿನಗಾಗಿ ಚಾಮರವ ಬೀಸಿ ಬರಲೆ?।।

ಏನೇನು ನೀಡಿದರೂ ನಿನ್ನ ಋಣ ತೀರದು
ನನ್ನೊಳೇನೂ ಇಲ್ಲ ನನ್ನದೆಂದು
ಓ ನನ್ನ ಪ್ರಿಯನಾಡೆ ಅಂತೆಯೇ ಸ್ವೀಕರಿಸು
ಪ್ರೀತಿಯೆಸಳಿನ ನನ್ನ ಹಾಡನೊಂದು ।।

ರಚನೆ : **ಸು. ರಂ. ಯಕ್ಕುಂಡಿ**

❍❍❍

# ಮದುವೆ ಬಂಧವ್ರೋ, ಅನುಬಂಧವ್ರೋ?

✍ ಶ್ರೀಮತಿ ರಾಜೇಶ್ವರಿ ಎಸ್. ಹೆಗಡೆ

ಭಾರತೀಯ ಸಂಸ್ಕೃತಿಯ ಹಿಂದೂ ಸಂಪ್ರದಾಯದ ಹದಿನಾರು ಸಂಸ್ಕಾರಗಳಲ್ಲಿ ಅತ್ಯಂತ ಮುಖ್ಯವಾದ ಸಂಸ್ಕಾರ ಮೂರು ಅಕ್ಷರದ ಮೂರುಗಂಟಿನಿಂದ ಸಪ್ತಪದಿಯ ಏಳು ಹೆಜ್ಜೆಗಳಿಂದ ಸಂಬಂಧವನ್ನು ಬೆಸೆಯುವ ಮದುವೆ ಎಂಬುದು ಆಗಿದೆ. ಹಿರಿಯರು ನಿಶ್ಚಯಿಸಿ ಮಾಡುವ ಮದುವೆಗೆ ಆಧ್ಯಾತ್ಮಿಕವಾಗಿ ಎತ್ತರದ ಮಹತ್ವದ ಸ್ಥಾನವನ್ನು ಕೊಡಲಾಗಿದೆ. ಮದುವೆಯ ಉದ್ದೇಶ ಉತ್ತಮ ಸಂಸ್ಕಾರದ ಪೀಳಿಗೆಯನ್ನು ಹುಟ್ಟುಹಾಕುವದರೊಂದಿಗೆ ಎತ್ತಣ ಮಾಮರ ಎತ್ತಣ ಕೋಗಿಲೆ ಎಂಬ ಹಾಂಗೆ ಎರಡೂ ಕುಟುಂಬಗಳನ್ನು ಒಂದುಗೂಡಿಸುವುದು ಆಗಿದೆ.

ಮದುವೆಯಿಂದ ದಂಪತಿಗಳಾದ ಎರಡೂ ಜೀವಗಳು ಒಂದಾಗುವುದು ಅಷ್ಟೇ ಅಲ್ಲ. ಗಾಳಿಬಂದಾಗ ತೂರಿಕೊಳ್ಳದೇ, ಒಳ್ಳೆಯ ಸಮಯಕ್ಕೂ ಕೆಟ್ಟ ಸಮಯಕ್ಕೂ ಒಬ್ಬರಿಗೊಬ್ಬರು ಆಸರೆಯಾಗಿ ಸಹಾಯ ಮಾಡಬೇಕು. ಇಲ್ಲಿ ವ್ಯವಹಾರದ ಯಾವುದೇ ಮಾತುಗಳು ಬರಬಾರದು. ಮದುವೆಯಾದ ಗಂಡ ಹೆಂಡತಿ ಇಬ್ಬರೂ ಅವರ ಬೇಕು ಬೇಡಗಳ ಇಷ್ಟಕಷ್ಟಗಳನ್ನು ಅರಿತುಕೊಂಡು ತಮಗೆ ಭಗವಂತ ಸಿದ್ಧಿಸಿದ ಪರಿಸ್ಥಿತಿಯಲ್ಲಿ ಪ್ರೀತಿಗೆ ಮೋಸ ಮಾಡದೇ ಬದುಕಿದರೆ ಜೀವನ ಸುಖಮಯದ ಸಂಗಮ ಎಂಬುದರಲ್ಲಿ ಎರಡು ಮಾತು ಇಲ್ಲ. ಆದರೆ ಇಂತಹ ಬದುಕುಗಳು ಇಪ್ಪತ್ತು ವರ್ಷಗಳ ಹಿಂದೆ ನಡೆಯುತ್ತಿದ್ದವು. ಈಗಿನ ಕಾಲದಲ್ಲಿ ಮದುವೆ ಎಂಬ ಈ ಪವಿತ್ರ ಸಂಸ್ಕಾರವನ್ನು ಅರಿಯದೇ ಎತ್ತು ನೀರಿಗೆ, ಕೋಣ ಏರಿಗೆ ಎಂಬಂತೆ ಆಗಿದೆ. ಕೋರ್ಟಿನಲ್ಲಿ ಜಡ್ಜ್ ಸಾಹೇಬರಿಗೂ ತೀರ್ಪನ್ನು ಕೊಡುವುದು ಕಷ್ಟಕರವಾದ ವಾತಾವರಣ ಮದುವೆಯ ಪವಿತ್ರ ಸಂಬಂಧ ಹಾಳು ಮಾಡುತ್ತಿದೆ. ಕಾರಣವಿಲ್ಲದೆ ಚಿಕ್ಕಪುಟ್ಟ ವಿಷಯಗಳಿಗೆ ಜಗಳ, ಮದುವೆಯಾದ ಮೂರು ತಿಂಗಳಲ್ಲಿ ಅತ್ತೆಯ ಮೇಲೆ ಸೊಸೆಯ ಪ್ರಹಾರ, ಅತ್ತೆ ಮಾಡಿದ್ದೆಲ್ಲಾ ತಪ್ಪು.. ತಪ್ಪು.. ತಪ್ಪು...

ಸೊಸೆಯ ಕಣ್ಣಿಗೆ ಇನ್ನೊಂದು ಕನ್ನಡಕ, ಕೂಲಿಂಗ್ ಗ್ಲಾಸ್ ಹಾಕಬೇಕೋ ಎಂದು ಅಂದುಕೊಳ್ಳುವ ಅತ್ತೆಯರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಮದುವೆಯ ಅರ್ಥವೇ ಬದಲಾಗಿದೆ.

ಮೊದಲಿನ ಕಾಲದಲ್ಲಿ ಹುಡುಗಿಯನ್ನೇ ನೋಡದೆ ಮದುಮಗ ತಂದೆ ತಾಯಿ ಒಪ್ಪಿದ ಹುಡುಗಿಗೆ ತಾಳಿಯನ್ನು ಕಟ್ಟಿ ಸುಖವಾದ ಜೀವನ ನಡೆಸುತ್ತಿದ್ದರು. ಈಗ ಹಿರಿಯರು ಮಾತುಕತೆ ನಡೆಸಿ ಮದುವೆ ಮಾಡಿದರೂ, ತಾವೇ ಪ್ರೀತಿ, ಪ್ರೇಮದ ಹಂದರದಲ್ಲಿ ಮದುವೆ ಮಾಡಿಕೊಂಡರೂ ಹೊಂದಾಣಿಕೆ ಸ್ವಭಾವದ ಕೊರತೆಯಿಂದ ಪತಿ..ಪತ್ನಿಯರ ನಡುವೆ ಭಾವಸಂಬಂಧಗಳು ಇಲ್ಲದೆ ಎಲ್ಲಿ ಹೋಯಿತು ಎಂದು ಹುಡುಕುವ ಸ್ಥಿತಿ ನಿರ್ಮಾಣವಾಗಿ ಈ ಪವಿತ್ರ ಸಂಸ್ಕಾರಕ್ಕೆ ಅಡಿಪಾಯದ ನೆಲಗಟ್ಟು ಇಲ್ಲದಂತೆ ಆಗಿದೆ.

ವಧು ವರ ಎರಡೂ ಕುಟುಂಬಗಳಲ್ಲಿಯೂ ಅಳತೆ ಮೀರಿದ ಬೇಡಿಕೆಗಳು, ವಿಶ್ವಾಸದ ಕೊರತೆಗಳು, ಎರಡು ಮೂರು ಮದುವೆ ಮಾಡಿಕೊಳ್ಳುವ ಜನಗಳು ಇವೆಲ್ಲವನ್ನೂ ಇಂದು ಕಾಣುವ ಪರಿಸ್ಥಿತಿ ಬಂದೊದಗಿದೆ. ಈ ಪವಿತ್ರ ಸಂಸ್ಕಾರಕ್ಕೆ ಇಂಥಹ ಕಪ್ಪು ಹೊದಿಕೆ ಮುಚ್ಚಿದವರು ಉಪ್ಪು ಹುಳಿ ಖಾರ ತಿಂದು ತೇಗಿದ ಮಾತು ಬಲ್ಲ ಭಗವಂತನ ಸೃಷ್ಟಿಯ ನಾವುಗಳೇ ಆಗಿದ್ದೇವೆ. ಅದು ಬದಲಾಗಬೇಕು. ಶ್ವೇತವರ್ಣದ ಹೊದಿಕೆ ಹೊದಿಸುವ ಜವಾಬ್ದಾರಿ ಹೆತ್ತವರು ಸಂಸ್ಕಾರದಲ್ಲಿ ತುಂಬಿರಬೇಕು. ಆವಾಗ ಪವಿತ್ರವಾದ ಮದುವೆ ಎಂಬ ಮೂರು ಅಕ್ಷರದ ಮೂರುಗಂಟು ಬಂಧನವಾಗದೆ ಅನುರಾಗದ ಅನುಬಂಧವಾಗಲಿದೆ ಎನ್ನಬಹುದಾಗಿದೆ.

ನನ್ನ ಅನಿಸಿಕೆ ಪ್ರಕಾರ ಮದುವೆ ಎಂಬುದು ಬಂಧನವಲ್ಲ. ಬ್ರಹ್ಮನ ಬರಹದ ಋಣಾನುಬಂಧದ ಅನುಬಂಧ. ಸಂಯಮ, ವಿವೇಕತೆಯಿಂದ ಬದುಕಿದರೆ ಏಳೇಳೂ ಜನ್ಮಕ್ಕೂ ಬೆಸೆಯುವ ರಾಜ ರಾಣಿಯ ಅನುಬಂಧ ಎಂಬುದರಲ್ಲಿ ಎರಡು ಮಾತಿಲ್ಲ.

ಮದುವೆ ಎಂದರೆ ಕೇವಲ ಹೆಣ್ಣಿನ ಕುತ್ತಿಗೆಗೆ ತಾಳಿಯನ್ನು ಕಟ್ಟಿಸಿ 'ಆಯಿತು, ಇನ್ನು ಮೇಲೆ ನೀವಿಬ್ಬರೂ ಗಂಡ ಹೆಂಡತಿ. ಹೋಗಿ...' ಎಂದು ಹೇಳಿ ಕಳಿಸಿಬಿಡುವುದಿಲ್ಲ.

ಒಂದು ಮದುವೆ ಎಂದರೆ ಅಲ್ಲಿ 'ಅಯ್ಯೋ... ಒಂದು ಶಾಸ್ತ್ರ ಇಲ್ಲ, ಸಂಪ್ರದಾಯ ಇಲ್ಲ, ನಮ್ ಕಾಲದಲ್ಲಿ ಹಿಂಗಿರಲಿಲ್ಲ' ಎನ್ನುವ ಕೆಲವು ಹಿರಿ ತಲೆಗಳಿರಬೇಕು. ಮದುವೆ ಅಂದರೆ ಅಲ್ಲಿ ಕೇವಲ ಅರ್ಧ ಅಡಿ ಜಾಗದ ವಿಚಾರಕ್ಕೆ ಗಲಾಟೆ ಮಾಡಿಕೊಂಡು ಹತ್ತಾರು ವರ್ಷಗಳಿಂದ ದೂರ ಉಳಿದಿದ್ದ ದಾಯಾದಿ ಕುಟುಂಬದವರು ತಾವೇ ಮುಂದೆ ನಿಂತು ಲವಲವಿಕೆಯಿಂದ ಅತಿಥಿಗಳನ್ನು ಸ್ವಾಗತಿಸುತ್ತಿರಬೇಕು. ಮದುವೆ ಎಂದರೆ ಅಲ್ಲಿ 'ಹುಡುಗಿಗೆ ಇನ್ನೂ ಓದು ಮುಗಿದಿಲ್ಲ, ಈಗಲೇ ಮದುವೆ ಮಾಡಿಬಿಡೋ ಅವಸರ ಏನಿತ್ತು ಇವರಿಗೆ?' ಅಂತ ಮಾತಾಡಿಕೊಳ್ಳೋ ಹೆಂಗಸರಿರಬೇಕು. ಮದುವೆ ಎಂದರೆ ಅಲ್ಲಿ 'ಇನ್ವಿಟೇಶನ್ ವಾಟ್ಸಪ್ಪಲ್ಲಿ ಕಳುಹಿಸಿದರೂ ಸಾಕು ಬಿಡಿ, ನಾವು ಬಂದೇ ಬರ್ತೀವಿ' ಎಂದು ಹೇಳಿ ಕುಟುಂಬ ಸಮೇತರಾಗಿ ಬಂದು ಮನಸಾರೆ ಓಡಾಡುವ ಸ್ನೇಹಿತರು, ಸಂಬಂಧಿಕರಿರಬೇಕು. ಮದುವೆ ಎಂದರೆ ಅಲ್ಲಿ 'ಇನ್ವಿಟೇಶನ್ ಕೊಡೋಕೆ ತಾನೇ ಬರೋದು ಬಿಟ್ಟು ತನ್ನ ಮಗನನ್ನು ಕಳಿಸಿದ್ದಾನೆ. ನಾವೇನು ಅಷ್ಟೊಂದು ದೂರದವರಾ...?' ಎಂದು ಮುನಿಸಿಕೊಂಡು ಗೈರಾದ ಹತ್ತಿರದ ಸಂಬಂಧಿಗಳೂ ಇರಬೇಕು.

ಮದುವೆ ಎಂದರೆ ಅಲ್ಲಿ 'ತಾವೇ ಖುಷಿಯಿಂದ ಮೂರು ಮೂರು ದಿವಸ ರಜೆ ಹಾಕಿ ದೂರದ ಊರಿನಿಂದ ಬಂದು ಎಲ್ಲರ ಜೊತೆ ಬೆರೆಯುತ್ತಾ, ಎಲ್ಲರನ್ನೂ ಪರಿಚಯ ಮಾಡಿಕೊಳ್ಳುತ್ತಾ ಖುಷಿ ಖುಷಿಯಿಂದ ಓಡಾಡುವ ವಧೂ ವರರ ಸ್ನೇಹಿತರಿರಬೇಕು. ಮದುವೆ ಎಂದರೆ ಅಲ್ಲಿ 'ಹುಡುಗ ಕುಡೀತಾನಂತೆ, ಅವನಿಗೆ ಮೊದಲೇ ಒಂದು ಹುಡುಗಿ ಜೊತೆ ಸಂಬಂಧ ಇತ್ತಂತೆ' ಎಂದು ಯಾರೋ ಹೇಳಿದ ಅಂತೆ ಕಂತೆ ವಿಷಯಗಳನ್ನು ತಾವೇ ಖುದ್ದಾಗಿ ನೋಡಿದವರಂತೆ ಇನ್ನ್ಯಾರ ಕಿವಿಗಳಿಗೋ ತಲುಪಿಸುವ ಜವಾಬ್ದಾರಿ ಹೊತ್ತ ಒಂದಷ್ಟು 'ಹಿತೈಷಿ'ಗಳು ಇರಬೇಕು. ಮದುವೆ ಎಂದರೆ ಅಲ್ಲಿ ಇದು ನಮ್ಮ ಒಡವೆ ವಸ್ತ್ರಗಳನ್ನು ತೋರಿಸೋಕೆ ಇರುವ ಒಳ್ಳೆಯ ಅವಕಾಶ' ಎಂದೇ ಭಾವಿಸಿಕೊಂಡು ಸರ್ವಾಲಂಕಾರ ಭೂಷಿತರಾಗಿ ಓಡಾಡುವ ಮಹಿಳೆಯರಿರಬೇಕು. ಮದುವೆ ಎಂದರೆ ಅಲ್ಲಿ 'ಮಗನಿಗಿನ್ನೂ ಸರಿಯಾದ ಕೆಲಸ ಸಿಕ್ಕಿಲ್ಲ. ಇವನ ವ್ಯಾಪಾರ ನೋಡಿದರೆ ಅಷ್ಟಕ್ಕಷ್ಟೇ. ಇಷ್ಟು ಖರ್ಚು ಮಾಡಿ ಮದುವೆ ಮಾಡೋದು ಬೇಕಿತ್ತಾ ಇವನಿಗೆ...' ಎನ್ನುತ್ತಾ ಕಾಳಜಿ ತೋರಿಸುವ ನೆಪದಲ್ಲಿ ಅಸೂಯೆ ಹೊರಹಾಕುವ ಹತ್ತಿರದ ಸ್ನೇಹಿತರಿರಬೇಕು. ಮದುವೆ ಎಂದರೆ ಅಲ್ಲಿ 'ಬನ್ನಿ ಅಂಕಲ್, ಒಂದು ಸೆಲ್ಫಿ ತಗೋಳ್ಳೋಣ, ಬನ್ನಿ ಆಂಟಿ, ಒಂದು ಸೆಲ್ಫಿ ತಗೋಳ್ಳೋಣ' ಎನ್ನುತ್ತಾ ಎಲ್ಲರನ್ನೂ ಕರೆಕರೆದು ಸೆಲ್ಫಿ ತೆಗೆದುಕೊಳ್ಳುವ ಸುಂದರ ಹುಡುಗಿಯರಿರಬೇಕು.

ಮದುವೆ ಎಂದರೆ ಭುಜದ ಮೇಲೆ ಕೈಯಿಟ್ಟು 'ಒಳ್ಳೆ ಊಟ ಹಾಕಿಸಿದಿರಿ ಸರ್, ನಾವಿನ್ನು ಬರ್ತೀವಿ' ಎಂದು ಹೇಳಿ ಹೋಗುವ ಸಹೋದ್ಯೋಗಿಗಳಿರಬೇಕು. ಮದುವೆ ಎಂದರೆ ಅಲ್ಲಿ ಹತ್ತಿರದ ಸಂಬಂಧಿ ಮಹಿಳೆಯೊಬ್ಬರು 'ಮಂಟಪದ ಪಕ್ಕದ ರೂಮಿನಲ್ಲಿಟ್ಟಿದ್ದ ನನ್ನ ಬ್ಯಾಗ್ ಒಳಗಿದ್ದ ಚಿನ್ನದ ಚೈನು ಕಾಣೆಸ್ತಿಲ್ಲ..' ಎಂದು ಹೇಳಿ ಎಲ್ಲರನ್ನೂ ಆತಂಕಕ್ಕೆ ದೂಡಿ, ಎಲ್ಲರ ಮೇಲೂ ಒಂದು ಅನುಮಾನ ಹುಟ್ಟಿಸಿ, ಕೊನೆಗೆ ಅದು ಅಲ್ಲೇ ಎಲ್ಲೋ ಸಿಗುವ ಮೂಲಕ ಪ್ರಕರಣ ಸುಖಾಂತ್ಯಗೊಂಡು ಆ ಮದುವೆಯ ನೆನಪುಗಳನ್ನು ಶಾಶ್ವತಗೊಳಿಸಬೇಕು. ಮದುವೆ ಎಂದರೆ 'ಈ ಛತ್ರದಲ್ಲಿ ಯಾಕಿಟ್ಟುಕೊಂಡರೋ ಗೊತ್ತಿಲ್ಲ. ಇಲ್ಲಿ ಪಾರ್ಕಿಂಗ್‌ಗೆ ಜಾಗಾನೇ ಇಲ್ಲ' ಎಂದು ಹೊರಗೆ ನಿಂತು ಮಾತಾಡುವ ಒಂದಷ್ಟು ಗಂಡಸರಿರಬೇಕು.

ಕೊನೆಯಲ್ಲಿ ಛತ್ರದವರ ಮೇಲೆ ಒಂದು ಸಣ್ಣ ದೂರು, ಫೋಟೋಗ್ರಾಫರ್ ಮೇಲೆ ಒಂದು ಸಣ್ಣ ಅಸಮಾಧಾನ, ಬಾಳೆ ಎಲೆ ಎತ್ತಿದವರ ಜೊತೆಗೆ ಒಂದು ಸಣ್ಣ ಚೌಕಾಶಿ... ಇವೆಲ್ಲವೂ ಇರಬೇಕು. ಇವೆಲ್ಲವೂ ಇದ್ದಾಗ ಮಾತ್ರವೇ ಮದುವೆ ಅನ್ನೋದು ಶಾಶ್ವತವಾಗಿ ನಮ್ಮ ನೆನಪಿನಲ್ಲಿ ಉಳಿಯೋದು.

ಇದು ಕೇವಲ ಮದುವೆಗೆ ಮಾತ್ರ ಸೀಮಿತವಲ್ಲ. ಮಂದಿರದ ಉದ್ಘಾಟನೆ, ಪುನರ್ ಪ್ರತಿಷ್ಠಾಪನೆ ಮುಂತಾದವುಗಳಲ್ಲೂ ಹೀಗೆಯೇ. ಎಲ್ಲವೂ, ಎಲ್ಲರೂ ಒಟ್ಟಿಗೆ ಸೇರಿದಾಗಲೇ ಅದಕ್ಕೊಂದು ಕಳೆ.

ಹಾಗಾಗಿ ಯಾರನ್ನೂ, ಯಾವುದನ್ನೂ ವಿರೋಧಿಸುವುದು ಬೇಡ. ಎಲ್ಲವನ್ನೂ ಒಟ್ಟಾಗಿ ಅನುಭವಿಸೋಣ, ಸ್ಮರಣೀಯವಾಗಿಸೋಣ. ❍

ಕವನ

# ಜೈ ಶ್ರೀರಾಮ

**- ಪ್ರವೀಣ್ ಕುಮಾರ್ ಮಾವಿನಕಡು**

ರಾಮನಿಂದು ಮತ್ತೆ ಬಂದು
ರಾಮ ರಾಜ್ಯ ಮೂಡಲಿ
ರಾಮನಾ ಜಪವು ತಪವು
ಜಗದಲೆಲ್ಲ ಮೊಳಗಲಿ ॥

ಪುರದ ಪುಣ್ಯ ಪುರುಷರೂಪಿ
ಶ್ರೀರಾಮನ ನೆನೆಯಿರಿ
ಮನೆಯು ಮನವು ಎಲ್ಲ
ಅವನ ನೆಲೆಯೇ ಎಂದು ತಿಳಿಯಿರಿ ॥

ಮನದಲಿರುವ ಅಸುರ ಭಾವ
ಅಳಿದು ಕಳೆದು ಹೋಗಲಿ
ರಾಮ ನಿಷ್ಠೆಯಿಂದ ಮನವು
ರಾಮಗುಡಿಯೇ ಆಗಲಿ ॥

ರಾಮನ್ಯಾಯ ರಾಮಧ್ಯೇಯ
ರಾಜಕೀಯವಾಗಲಿ
ಭರತಭೂಮಿ ಎಲ್ಲ ಇಂದು
ರಾಮರಾಜ್ಯವಾಗಲಿ ॥

ರಾಮಭಾವ ರಾಮಗುಣವು
ರಾಜಕೀಯವಾಗಲಿ
ಭರತ ಭೂಮಿ ಎಲ್ಲ ಇಂದು
ರಾಮರಾಜ್ಯವಾಗಲಿ ॥

ರಾಮಭಾವ ರಾಮಗುಣವು
ನಮ್ಮ ಮನದಿ ಮೂಡಲಿ
ಶಾಂತಿ -ತ್ಯಾಗ -ಸೌಹಾರ್ದ
ಮೂಡಿ ಜಗವ ಗೆಲ್ಲಲಿ ॥

ಪಿತೃಪ್ರೇಮ - ಭ್ರಾತೃಭಾವ
ಪತ್ನಿ ನಿಷ್ಠೆ ತಿಳಿಯಿರಿ
ಪತಿಯೇ ತಾನೇ ದೈವವೆಂಬ
ಭಾವ ನೀವು ಮರೆಯಿರಿ ॥

ಹನುಮಭಕ್ತಿ ಸ್ವಾಮಿನಿಷ್ಠೆ
ರಾಷ್ಟ್ರಪ್ರೇಮ ಅರಿಯಿರಿ
ದೇಶಸೇವೆಯನ್ನು ಮಾಡೋ
ಪ್ರಜೆಯು ನೀವು ಆಗಿರಿ ॥

ರಾಮ-ಸೀತೆ-ಲಕ್ಷ್ಮಣ
ಎನಲು ಮನವು ಪಾವನ
ಹನುಮನಿರಲು ಜೊತೆಗೆ
ಇಂದು ಧನ್ಯೋಸ್ಮಿ ಜೀವನ ॥

ರಾಮ ರಾಮ ಎಂದರೆ
ಇಲ್ಲ ಯಾವ ತೊಂದರೆ
ಜೀವನವೇ ಪಾವನವು
ಅಯೋಧ್ಯೆಗೆ ಬಂದರೆ ॥

ಶಾಂತಿಧಾಮ ಪುಣ್ಯತಾಣ
ಅಯೋಧ್ಯೆಯೇ ಆಗಲಿ
ಕೋಟಿ ಕೋಟಿ ಹೃದಯದಲ್ಲಿ
ರಾಮಲಲ್ಲಾ ನೆಲೆಸಲಿ ॥

○○○

# ಶ್ರೀರಾಮ ಮಂದಿರ

✍ ಹರಿಶ್ಚಂದ್ರ ಶೆಟ್ಟಿ, ಕೌಡೂರು

ಭಾರತವಲ್ಲದೆ ಜಗತ್ತಿನ ಇನ್ಯಾವುದೇ ದೇಶದ ಸಾಂಸ್ಕೃತಿಕ ಇತಿಹಾಸದಲ್ಲಿ ರಾಜ ಪ್ರಭುತ್ವವನ್ನು ವಿರೋಧಿಸಿದ ಪ್ರಜೆಗಳು ಬದುಕುಳಿದ ಕುರುಹುಗಳು ಕಾಣಸಿಗುವುದೇ ಇಲ್ಲ. ರಾಜನೇ ಪ್ರತ್ಯಕ್ಷ ದೇವರು. ಆತನಲ್ಲಿ ದೋಷ ಕಾಣುವುದೇ ಮಹಾಪರಾಧ ಎನ್ನುವಂತಹ ಅಲಿಖಿತ ಶಾಸನಗಳ ಅಡಿಯಲ್ಲಿಯೇ ಜಗತ್ತಿನ ಇನ್ನಿತರ ನಾಗರಿಕತೆಗಳು ಬೆಳೆದವು. ಅಲ್ಲಿ ಜನಸಾಮಾನ್ಯರ ಪ್ರತಿರೋಧದ ಸ್ವರಗಳನ್ನಾಗಲಿ, ರಾಜ ಶಾಸನದ ವಿಮರ್ಶೆ ಎಂಬ ಅಭಿವ್ಯಕ್ತಿ ಸ್ವಾತಂತ್ರ್ಯದ ಹುಚ್ಚು ಕಲ್ಪನೆಯನ್ನಾಗಲಿ ಊಹಿಸುವುದೇ ಬಾಲಿಶತನ.

ಆದರೆ ಭಾರತದ ಮಹಾಕಾವ್ಯಗಳಲ್ಲಿ ದೈವತ್ವವನ್ನು ಪಡೆದ ಮಹಾಪುರುಷರೂ ಪ್ರಶ್ನಾತೀತರಲ್ಲ. ಆ ಮಹಾ ಪುರುಷರೆಲ್ಲ ತಮ್ಮನ್ನು ಪ್ರಶ್ನಿಸಿದ ಜನಸಾಮಾನ್ಯನನ್ನೂ ತಮ್ಮ ಜೊತೆ ಉಳಿಸಿ ಬೆಳೆಸಿದರು. ಇಲ್ಲದಿದ್ದರೆ ಶ್ರೀರಾಮಚಂದ್ರ ನೆಂಬ ಅಖಂಡ ಆರ್ಯಾವರ್ತದ ಅನಭಿಷಿಕ್ತ ಸಾರ್ವಭೌಮನನ್ನು ಒಬ್ಬ ಸಾಮಾನ್ಯ ಅಗಸ ಪ್ರಶ್ನಿಸಿದ. ಜಗತ್ತಿನ ಬೇರೆ ಯಾವುದೇ ದೇಶಗಳಲ್ಲಾಗಿದ್ದರೆ ಅಂತಹ ಅಪವಾದ ಹೊರಿಸಿದ ಅಗಸನ ರುಂಡವನ್ನೇ ಚೆಂಡಾಡಿ ಬಿಡುತ್ತಿದ್ದರು. ಆದರೆ ಶ್ರೀರಾಮಚಂದ್ರನ ಜೊತೆ ಒಬ್ಬ ಜುಜುಬಿ ಅಗಸ, ತ್ರೇತಾಯುಗದಿಂದ ಕಲಿಯುಗದವರೆಗೂ ಉಳಿದುಕೊಂಡು ಬಂದ ಆ ಮೂಲಕ ಕೋಟ್ಯಾಂತರ ಜನರ ವಿಮರ್ಶೆಗೆ ವಸ್ತುವಾದ. ಜೊತೆಗೆ ಭಾರತದಂತಹ ಸಹನಶೀಲ ದೇಶದ ಸಹಸ್ರಾರು ಬುದ್ಧಿಜೀವಿ ಜನರಿಗೆ ಅಶನ ವಸನಗಳನ್ನು ಗಳಿಸಿಕೊಡುವ ಮಾರ್ಗೋಪಾಯನಾದ.

ಬ್ರಹ್ಮದೇವನ ಮಗ ಮಾರಿಷಿ, ಆತನ ಮಗ ಕಶ್ಯಪ, ಕಶ್ಯಪನ ಮಗ ವಿವಸ್ವಾನ. ಈ ವಿವಸ್ವಾನನ ಮಗನೇ ವೈವಸ್ವತ ಮನು. ವಿಶ್ವ ಪ್ರಳಯದ ಕಾಲಕ್ಕಿದ್ದ ಮನುವೇ ಈತ. ಈತನ ಹತ್ತು ಮಂದಿ ಮಕ್ಕಳಲ್ಲಿ ಇಕ್ಷ್ವಾಕು ಒಬ್ಬ. ಆತನ ರಾಜಧಾನಿ ಅಯೋಧ್ಯೆ. ಶ್ರೀರಾಮಚಂದ್ರನ ವಂಶಕ್ಕೆ ಇಕ್ಷ್ವಾಕು ವಂಶವೆಂಬ ಹೆಸರು ಬರಲು ಕಾರಣನೀತ. ಅಲ್ಲಿಂದ ಮುಂದೆ ಇಕ್ಷ್ವಾಕುವಿನ ವಂಶದಲ್ಲಿ ಕುಕ್ಷಿ, ವಿಕುಕ್ಷಿ, ಭಾನ, ಅನರಣ್ಯ, ಪೃಥು, ತ್ರಿಶಂಕು, ದುಂದುಮಾರ, ಯವನಾಶ್ವ, ಮಾಂಧಾತ, ಸುಸಂಧಿ. ಧ್ರುವಸಂಧಿ, ಭರತ, ಅಸಿತ, ಸಾಗರ, ಅಸಮಂಜ, ಅಂಶುಮಾನ, ದಿಲೀಪ, ಭಗೀರಥ, ಕಾಕುತ್ಸ್ಥ, ರಘು, ಪ್ರವೃದ್ಧ, ಶಮಂತಕ, ಸುದರ್ಶನ, ಅಗ್ನಿವರ್ಣ, ಶೀಘ್ರಾಗ, ಮೇರು, ಪ್ರಶುಕ್ಷಕ, ಅಂಬರೀಷ, ನಹುಷ, ಯಯಾತಿ, ನಭಘ ಮತ್ತು ಅಜನವರೆಗೆ ಮೂವತ್ತೆರಡು ಮಂದಿ ರಾಜಶ್ರೇಷ್ಠರು ತಮ್ಮ ಪಿತೃಗಳಿಂದ ಬಳುವಳಿಯಾಗಿ ಪಡೆದು ಅಯೋಧ್ಯೆಯನ್ನು ಆಳಿದರು. ಆ ನಂತರ ಬಂದ ದಶರಥನ ಮಗನೇ ಶ್ರೀರಾಮಚಂದ್ರ. ಅಲ್ಲಿಗೆ ಶ್ರೀರಾಮಚಂದ್ರನದ್ದು ಮೂವತ್ತೆಂಟನೆಯ ತಲೆಮಾರು. ಜಗತ್ತಿನ ಯಾವ ಲಿಖಿತವಾಗಲಿ, ಮೌಖಿಕ ಸಾಹಿತ್ಯದಲ್ಲಾಗಲಿ ಇಷ್ಟೊಂದು ದೊಡ್ಡ ತಲೆಮಾರುಗಳ ಇತಿಹಾಸ ದೊರಕುವುದಿಲ್ಲ. ಈ ರೀತಿ ತಮ್ಮ ವಂಶವೃಕ್ಷದ ಸ್ಪಷ್ಟ ಚಿತ್ರಣವುಳ್ಳ ಯಾವುದೇ ವ್ಯಕ್ತಿಯನ್ನಾಗಲಿ, ಶಕ್ತಿಯನ್ನಾಗಲಿ ಭರತ ಭೂಮಿಯಲ್ಲದೆ ಜಗತ್ತಿನ ಇನ್ಯಾವುದೇ ಜಾಗದಲ್ಲಿ ಕಲ್ಪಿಸುವುದೂ ಅಸಾಧ್ಯ. ಅಂತಹ ಒಂದು ಪ್ರಬುದ್ಧ ಮತ್ತು ಸಂಸ್ಕಾರಯುತ ರಾಜವಂಶಗಳು ಜಗತ್ತನ್ನು ಆಳಿದ ಉದಾಹರಣೆಗಳನ್ನು ಕಾಣಬೇಕಾದರೆ ಭರತವರ್ಷದ ಪುಣ್ಯ ಮಹಾಕಾವ್ಯಗಳೊಳಗೆ ಇಳಿಯಬೇಕು. ಅಲ್ಲಿನ ಕಥೆ, ಉಪಕಥೆಗಳ ಪಾತ್ರಗಳು ನಾನಾ ಕವಲುಗಳಾಗಿ ಹೊರಟರೂ ಕೊನೆಗೆ ಮೂಲ ಕಥೆಯ ಸೂತ್ರದಲ್ಲಿ ಸೇರಿಕೊಳ್ಳುತ್ತವೆ. ಕೇವಲ ಕವಿ ಕಲ್ಪನೆಯಲ್ಲಿ ಇಷ್ಟೊಂದು ಸಂಖ್ಯೆಯ ಪಾತ್ರಗಳನ್ನು ಕಥೆಯ ಸ್ವಾರಸ್ಯ ಕೆಡದಂತೆ ಪೋಣಿಸಿಕೊಂಡು ಬರೆಯುವುದು ಸಾಧ್ಯವಿಲ್ಲ. ಮಾತ್ರವಲ್ಲ ಬಾಯ್ದೆರೆಯಾಗಿ ಅಂತಹ ಮಹಾಕಾವ್ಯವನ್ನು ತಲೆಮಾರಿನಿಂದ ತಲೆಮಾರಿಗೆ ದಾಟಿಸಿಕೊಂಡು ಬರುವುದೂ ಸುಲಭ ಮಾತಲ್ಲ. ಭಾರತೀಯರ ಈ ಕಾವ್ಯ ಪರಂಪರೆಗಳು ಇಂದಿಗೂ ನಿಗೂಢ. ಅವುಗಳ ಆಳ ಅಗಲಗಳ ಬಗ್ಗೆ ನಾವು

ತಿಳಿದುಕೊಳ್ಳುವುದು ಎಂದರೆ ಕೊಳದ ನೀರಿನಲ್ಲಿ ಚಂದ್ರನನ್ನು ನೋಡಿ ಚಂದ್ರನ ಗಾತ್ರವನ್ನು ಊಹಿಸಿಕೊಂಡಂತೆ.

ಆಧುನಿಕ ವಿಜ್ಞಾನ ಶ್ರೀರಾಮನ ಕಾಲ ಇಂದಿಗಿಂತ ಸುಮಾರು ಏಳು ಸಾವಿರ ವರ್ಷ ಹಿಂದಿನದು ಎನ್ನುತ್ತದೆ. ವಿಜ್ಞಾನ ಎನ್ನುವುದು ಸಾಕ್ಷ್ಯಾಧಾರಗಳ ಮೇಲೆ ನಿಂತಿರುವಂತದ್ದು. ಆದುದರಿಂದ ವೈಜ್ಞಾನಿಕ ಆವಿಷ್ಕಾರಗಳನ್ನು ಪ್ರಶ್ನಿಸುವುದು ಕೆಲವರ ಪ್ರಕಾರ ಉದ್ದಟತನ. ಅದು ಏನೇ ಇರಲಿ ಆದರೆ ಭಾರತೀಯರ ಕಲ್ಪನೆಯಲ್ಲಿ ಶ್ರೀರಾಮಚಂದ್ರ ಸುಮಾರು ಎಂಟು ಲಕ್ಷದ ಎಪ್ಪತ್ತು ಸಾವಿರ ವರ್ಷದ ಹಿಂದೆ ಈ ಭರತ ಭೂಮಿಯಲ್ಲಿ ನಡೆದಾಡಿದ ದೇವರು. ಇಂದಿನ ಕಾಲಘಟ್ಟಕ್ಕೆ ಶ್ರೀರಾಮನ ಕಾಲಘಟ್ಟವನ್ನು ಹೋಲಿಸಿಕೊಂಡು ತನ್ನ ಅನ್ನದ ದಾರಿಯನ್ನು ಕಂಡುಕೊಳ್ಳುವ ಬುದ್ಧಿಜೀವಿಗಳ ವಾದಗಳನ್ನು ಬದಿಗಿಟ್ಟು ಆ ಮಹಾಪುರುಷನ ಯೋಗ್ಯತೆ ಯನ್ನು ಕಲ್ಪಿಸಿಕೊಳ್ಳುವುದೇ ಒಂದು ರೋಮಾಂಚಕ ಅನುಭವ. ಆತನೇನೂ ಒಮ್ಮಿಂದೊಮ್ಮೆಲೆ ಅವಧರಿಸಿದ ಶಾಂತಿ ದೂತನಲ್ಲ. ವಿದ್ಯೆಯ ಮುಖವನ್ನೇ ನೋಡದ ಧರ್ಮ ಪ್ರವರ್ತಕನಲ್ಲ. ಜನರಿಗೆ ನೀವೆಲ್ಲಾ ನನ್ನನ್ನೇ ನಂಬಿಕೊಂಡು ಬಂದರೆ ನಿಮಗೆಲ್ಲ ಮೋಕ್ಷ ಕರುಣಿಸುತ್ತೇನೆ ಎನ್ನುವ ಮೌಢ್ಯದ ಉಪದೇಶವನ್ನಾತ ನೀಡಲಿಲ್ಲ.

ತನ್ನ ಮನಸ್ಸಿಗೆ ತೋಚಿದ ವಿಚಾರಗಳನ್ನು ಧಾರ್ಮಿಕ ಕಟ್ಟುಪಾಡುಗಳೆಂಬ ಪುಸ್ತಕದಲ್ಲಿ ಬರೆದಿಟ್ಟು ಜನರ ಚಟ್ಟ ಕಟ್ಟಲು ಪ್ರೇರೇಪಿಸಲಿಲ್ಲ. ಆತನೆಂದೂ ತನ್ನನ್ನು ತಾನು ದೇವರೆಂದು ಕರೆದುಕೊಳ್ಳಲಿಲ್ಲ. ಸಾಮಾನ್ಯ ಜನಮಾನಸದಲ್ಲಿ ತನ್ನ ಆದರ್ಶಮಯ ವ್ಯಕ್ತಿತ್ವದಿಂದ ಆತ ದೇವರಾಗಿ ಪರಿವರ್ತಿತನಾದ. ಶ್ರೀರಾಮನ ಭಕ್ತರ ಐದು ನೂರು ವರ್ಷಗಳ ಸಂಘರ್ಷಗಳಿಗೆ ಸೈದ್ಧಾಂತಿಕ ಜಯ ಎನ್ನುವ ಹಾಗೆ ಶ್ರೀರಾಮ ಚಂದ್ರ ಸ್ವಾಮಿಯ ದಿವ್ಯ ಮಂದಿರ ಲೋಕಾರ್ಪಣೆಗೊಂಡಿದೆ. ಈ ಶುಭಕಾಲದಲ್ಲಿ ಪ್ರಭು ದಾಶರಥಿಯು ಎಲ್ಲರಿಗೂ ಸದ್ಬುದ್ಧಿಯನ್ನು ಕೊಡಲಿ. ತನ್ನೆಲ್ಲ ಭಕ್ತರಿಗೂ ಆಯುರಾರೋಗ್ಯ ಸುಖ ಸಂಪದಗಳನ್ನಿತ್ತು ಪೊರೆಯಲಿ. ❍


ಕವನ

# ಬದುಕಿ ಬಿಡಬೇಕಿತ್ತು

– ರಜನಿ ಅಶೋಕ ಜೀರಗ್ಯಾಳ

ಒಂದು ಭಂಡ ಧೈರ್ಯವನ್ನಿಟ್ಟುಕೊಂಡು
ಬದುಕಿ ಬಿಡಬೇಕಿತ್ತು ಒಂದಿಷ್ಟು
ಚಾಲಾಕಿತನವನ್ನಿಟ್ಟುಕೊಂಡು
ಬದುಕಿಬಿಡಬೇಕಿತ್ತು ಮುಖವಾಡಗಳನ್ನ
ಹಾಕಿಕೊಂಡು
ಬದುಕಿ ಬಿಡಬೇಕಿತ್ತು ಯಾಂತ್ರಿಕ
ನಗುವನ್ನಿಟ್ಟುಕೊಂಡು
ಬದುಕಿಬಿಡಬೇಕಿತ್ತು
ಬೇಸರ ದುಃಖಗಳನ್ನೆಲ್ಲ ಯಾರದೊ ಹೆಗಲಿಗೆ
ಜಾರಿಸಿಕೊಂಡು
ಬದುಕಿ ಬಿಡಬೇಕಿತ್ತು
ಲಂಚವನ್ನೆ ಮಂಚಮಾಡಿಟ್ಟುಕೊಂಡು
ಬದುಕಿಬಿಡಬೇಕಿತ್ತು ಸಾಲಗಾರರಿಗೆ ಚಳ್ಳೆಹಣ್ಣು
ತಿನ್ನಿಸಿಕೊಂಡು
ಬದುಕಿಬಿಡಬೇಕಿತ್ತು ಜಾತಿಧರ್ಮ ದಳ್ಳುರಿಗೆ
ತುಪ್ಪ ಸುರುವಿಕೊಂಡು
ಬದುಕಿಬಿಡಬೇಕಿತ್ತು ಸುಳ್ಳುಜಗತ್ತಿನಲಿ
ನಾನೊಬ್ಬನೇ ಸತ್ಯವಂತನೆಂದುಕೊಂಡು
ಬದುಕಲಿಲ್ಲ ಯಾಕೋ......
ಇವನ್ನೆಲ್ಲ ನನ್ನದಾಗಿಸಿಕೊಂಡು
ನಾನು ಬುದ್ದನಾಗಲು ಹೊರಟೆ ನಾನು
ಬಸವನಾಗಲು
ಹೊರಟೆ ಈ ಜಗ ಯಾಕೊ ನನ್ನ
ಅರ್ಥೈಸಿಕೊಳ್ಳಲಿಲ್ಲ?
ಈ ಜಗ ಯಾಕೊ ನನ್ನ ಅರ್ಥೈಸಿಕೊಳ್ಳಲಿಲ್ಲ?

❍❍❍


With Best Compliments from
SHRINIVAS
BOARDING & LODGING
Best Wishes From MR. VENUGOPAL L. SHETTY.
SHRINIVAS
BOARDING & LODGING
Super Delux Rooms
Delux Rooms
Semi Delux Rooms
Add. : Balaji Towers, Suratkal, N.H. Junction, Suratkal, Karnataka.
Ph. : 0824 2476633 / 2478833.
Email : shrinivaslodiging@yahoo.com
Website : www.shrinivaslodge.com



ಪೂಜಾ ನಿರತ ಶ್ರೀ ಚಂದ್ರಶೇಖರ್ ಶೆಟ್ಟಿ ದಂಪತಿ



ಪೂಜಾ ನಿರತ ಶ್ರೀ ಸುನಿಲ್ ಶೆಟ್ಟಿ ದಂಪತಿ ಮತ್ತು ಶ್ರೀಮತಿ ತಾರಾ ಪ್ರಕಾಶ್ ಶೆಟ್ಟಿ ದಂಪತಿ



ಭಜನಾ ನಿರತ ಅಸೋಸಿಯೇಶನ್‌ನ ಸದಸ್ಯರು


*With Best Compliments From :*

# Li-Vans
## MEN'S WEAR

Customized Tailoring For Men And Women
Suits ,Trousers , Shirts And Ethnic wear
We are also stockiest of leading brands Like
Raymond , Siyaram's , ARVIND , Reid & Taylor, Linen
And also Imported Fabrics

**Contact Mr. Vinay Shetty 9821187799**

Ashwamedh Apts., Ram Maruti Cross Road,
Naupada, Thane - 400 602. **Phone : 2540 8356**

## ಅಮೃತೇಶ್ವರ ಇಂಗ್ಲಿಷ್ ಮೀಡಿಯಂ ಹೈಸ್ಕೂಲ್ ವಾಮಂಜೂರು ಇದರ ಹೊಸ ಹೈಸ್ಕೂಲ್ ಕಟ್ಟಡದ ಉದ್ಘಾಟನೆ ಮತ್ತು ರಜತ ಮಹೋತ್ಸವ ಆಚರಣೆ








ಕೃತಿ ಪರಿಚಯ

# ಜ್ಞಾನಯೋಗಿಯೆಂಬ ಮಹಾಜ್ಯೋತಿ...

✍ ಅಭಿಜ್ಞಾ ಪಿ. ಎಂ. ಗೌಡ, ಮಂಡ್ಯ

ಮಹಾಮೇರು ಕಾವ್ಯ ಮಹಾತೇಜ ಕಾಯಂ
ಮಹಾಶೂರ ದೀಪಂ ಪ್ರದೀಪಂ ಚ ದೇವಂ
ಮಹಾಜ್ಯೋತಿ ರೂಪಂ ಮಹಾಕಾರ್ಯ ಸಿದ್ಧಂ
ಮಹಾತ್ಯಾಗಿ ರೂಪ್ಯಂ ಮಹಾಜ್ಞಾನಿ ರೂಪಂ ।

ತಮ್ಮ ನಾಮದೊಳಗೆ ಪ್ರಜ್ವಲಿಸುವ ಪ್ರದೀಪವಿದ್ದು, ಕನ್ನಡ ಸಾಹಿತ್ಯಕ್ಷೇತ್ರದೊಳಗೆ ದೇದೀಪ್ಯಮಾನವಾಗಿ ಶೋಭಿಸುತ್ತಿರುವ ಕಾವ್ಯಾಮೃತ ಕಾವ್ಯ ಕರ್ತೃ ಪ್ರದೀಪ್ ಕುಮಾರ್ ಸರ್‌ರವರು. ಸಾಹಿತ್ಯವನ್ನೇ ತಮ್ಮ ಜೀವನದ ಭಾಗವಾಗಿ ಮೈಗೂಡಿಸಿಕೊಂಡು ತಾಯಿ ಭುವನೇಶ್ವರಿಯ ಮಡಿಲಲ್ಲಿ ಪ್ರತಿದಿನವು ಅದ್ಭುತವಾದ ಕಾವ್ಯಲಹರಿಗಳು. ಆರೋಗ್ಯ, ಸಮಾಜ, ಆಧ್ಯಾತ್ಮ ಚಿಂತನೆಗಳು, ಜ್ಞಾನಯೋಗಿಗಳ ಜೀವನದರ್ಶನ, ಹೀಗೆ ಹಲವಾರು ಸಾಹಿತ್ಯದ ಪ್ರಕಾರಗಳ ಬರೆಹಗಳಿಂದ ಉತ್ಸುಕರಾಗಿದ್ದು, ವಿರಾಜಮಾನವಾಗಿ ಬೆಳಗುತ್ತ ಕನ್ನಡಾಂಬೆಯ ಸೇವೆಗೈಯ್ದು ಕನ್ನಡ ಸಾರಸ್ವತ ಲೋಕದಲ್ಲಿ ಹೊಂಗಿರಣದಂತೆ ರಾರಾಜಿಸುತ್ತಿರುವ ಕವಿ ಕುಲೋತ್ತಮರಿವರು. ಹಾಗೆಯೇ ನಮ್ಮೆಲ್ಲರ ಕಂಗಳಿಗೂ ಸುಂದರವಾಗಿ ಗೋಚರಿಸುತ್ತಿರುವ ಜ್ಞಾನದ ಖನಿ. ಇವರು ಸಾಹಿತ್ಯವನ್ನು ಜನಜೀವನದ ಪ್ರತಿಬಿಂಬದಂತೆ ತೋರಿಸಿರುವುದನ್ನು ಅವರ ಮಹಾಕೃತಿಯಲ್ಲಿ ಕಾಣಬಹುದಾಗಿದೆ. ಆದರೆ ಇಲ್ಲಿ ಅದು ಬಿಂಬ ಮಾತ್ರವಲ್ಲದೆ ಪ್ರತಿಫಲದಂತಿರುವುದನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದಾಗ ಮಾತ್ರ ತಿಳಿಯ ಬಹುದಾಗಿದೆ.

ಈ ಮಹಾಕೃತಿಯನ್ನು ಮನಮುಟ್ಟುವಂತೆ ಓದುಗರ ಮುಂದೆ ಅದ್ಭುತವಾಗಿ ಪ್ರದರ್ಶಿಸುತ್ತ ಮನಸೆಳೆದಿರುವ ಕಾವ್ಯಕರ್ತೃಗಳ ಬರಹದ ಶೈಲಿ ಎಂಥವರನ್ನು ಮಂತ್ರಮುಗ್ಧವಾಗಿಸುತ್ತದೆ. ಅವರ ಕಾವ್ಯದ ಮತ್ತೊಂದು ವಿಶೇಷ ಇಡೀ ಕಾವ್ಯಾಮೃತ ಮಾಲೆಯ ಪ್ರತಿಸಾಲುಗಳಲ್ಲೂ ಐದೈದು ಅಕ್ಷರಗಳಿಂದ ನಾಲ್ಕು ನಾಲ್ಕು ಪದಗಳಿರುವುದು ವಿಶೇಷವಾಗಿದ್ದು ಮುಕ್ತ ರಗಳೆ ಛಂದಸ್ಸಿನಲ್ಲಿ ರಚಿಸಿರುವುದು ಅವರ ಕಾವ್ಯ ಕೃಷಿಯಲ್ಲಿನ ಅದ್ಭುತ ಜ್ಞಾನ ಭಂಡಾರವನ್ನು ಎತ್ತಿ ತೋರಿಸಿದೆ. ಹಾಗೆಯೇ ಅವರೊಳಗಿನ ಭಾವದೊನಲು, ಬರೆಯಬೇಕೆಂಬ ತುಡಿತ ಮಿಡಿತಗಳು ಬರೆಹದ ಘನತೆಯನ್ನು ಹೆಚ್ಚಿಸಿವೆ. ಬರೆಹದೊಳಗೆ ಅದ್ಭುತ ಪದಪುಂಜಗಳ ಮಾಲೆ ವಿಶಿಷ್ಟ, ವಿನೂತನ, ವಿಶೇಷ ಅರ್ಥಗಳನ್ನು ಒದಗಿಸಿ ಕೊಡುವುದರೊಂದಿಗೆ ಓದುಗರಿಗೆ ಮುಂದೇನು? ಎಂಬ ಕುತೂಹಲವನ್ನು ಕೆರಳಿಸಿದಂತಿರುವುದು ನಿಜಕ್ಕೂ ಹರ್ಷದಾಯಕವಾಗಿದೆ. ಅವರ ಕೃತಿಯೊಳಗಿನ ಪ್ರಶಂಸೆ, ಪೂಜೆ, ಆರಾಧನೆ, ಉಪಾಸನೆ ಈ ಪದಗಳು ಶ್ರೀಗಳ ಗಾಂಭೀರ್ಯತೆ ಹಾಗೂ ವ್ಯಕ್ತಿ ವ್ಯಕ್ತಿತ್ವದ ಮಹತ್ವವನ್ನು ಸಾರುವಂತಿದೆ. ಕೇವಲ ಓದಿಸಿಕೊಳ್ಳದೆ ಮಸ್ತಕದೊಳಗೆ ಅಚ್ಚೊತ್ತಿ ನಿಲ್ಲುವಂತೆ ಬರೆದಿರುವ ಈ ಬೃಹತ್ ಕಾವ್ಯಮಾಲೆ ಓದುಗರಿಗೆ ಓದುವ ಎದೆ ಹಂಬಲವನ್ನು ತೀವ್ರವಾಗಿಸಿರುವು ದಂತೂ ಸುಳ್ಳಲ್ಲ.

ಸಿದ್ಧಿಯೆಂದರೆ ನಿಸ್ತರಿಸು, ನಿರಪೇಕ್ಷ, ನಿಶ್ಚಿತವಾದ ನಿರ್ಧಾರಣ. ಪೂರ್ಣ ವಿಶ್ರಾಂತಿ, ತಾದಾತ್ಮ್ಯ, ಶಾಂತಿ ಯೆಂಬುದನ್ನು ಸಿದ್ಧೇಶ್ವರ ಸ್ವಾಮೀಜಿಯವರ ಬದುಕಿನಾರ್ಥದ ಬಗ್ಗೆ ವಿವರಿಸುವಾಗ ಹೇಳಿರುವುದಂತೂ ಅನುಪಮವೆನಿಸಿತು.

ಈ ಕಾವ್ಯದ ಕರ್ತೃಗಳಾದ ಹೆಬ್ರಿ ಸರ್ ಅವರ ಬಗ್ಗೆ ಮಾತನಾಡುವುದಾದರೆ ರಾಷ್ಟ್ರಕವಿ ಕುವೆಂಪುರವರ ಒಂದು ಕವಿವಾಣಿ ನೆನಪಾಗುತ್ತಿದೆ.

ಕರ್ನಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ?
ಮಂತ್ರ ಕಣಾ। ಶಕ್ತಿ ಕಣಾ।
ತಾಯಿ ಕಣಾ। ದೇವಿ ಕಣಾ।
ಬೆಂಕಿ ಕಣಾ। ಸಿಡಿಲು ಕಣಾ।
ಕಾವ ಕೊಲುವ ಒಲವ ಬಲವ
ಪಡೆದ ಚಲವ ಚಂಡಿ ಕಣಾ
ಋಷಿಯ ಕಾಣ್ಬ ಕಣ್ಣಿಗೆ।

ಈ ರೀತಿಯಲ್ಲೇ ಕನ್ನಡ ಕನ್ನಡತನವನ್ನೇ ತಮ್ಮ ಉಸಿರಾಗಿಸಿಕೊಂಡಿದ್ದು, ಕನ್ನಡ ಸಾಹಿತ್ಯವನ್ನು ತಮ್ಮ ದೇಹದ ನರನಾಡಿಯ ತುಂಬೆಲ್ಲ ತುಂಬಿಸಿಕೊಂಡು ಕನ್ನಡದ

ಕಂಪನ್ನು ಎಲ್ಲೆಡೆ ಪಸರಿಸುತ್ತಿರುವುದನ್ನು ನಾವೆಲ್ಲರೂ ಕಾಣಬಹುದಾಗಿದೆ. ಅಂತಹ ವಿದ್ವತ್ಪೂರ್ಣ ಮಹಾಕವಿಗಳು. ಕನ್ನಡದ ಅಸ್ಮಿತೆಯನ್ನು ಬಿಂಬಿಸಿರುವರು.

ಇವರ ಸಾಹಿತ್ಯವನ್ನು ಓದಿದಷ್ಟು ನಮ್ಮೊಳಗೂ ಸಾಹಿತ್ಯದ ಕಸುವು ಹೆಚ್ಚುತ್ತದೆ ಎಂಬುದಕ್ಕೆ ಇವರ ಬರೆಹಗಳೇ ಸಾಕ್ಷಿ. ಅಮೋಘವಾದ ಸಾಹಿತ್ಯದ ಕೃಷಿ ಮಾಡಿ ಜನಮಾನಸದೊಳಗೆ ಧ್ರುವತಾರೆಯಂತೆ ಮಿನುಗುತ್ತಿರುವ ಇವರು ತಮ್ಮದೇ ಆದ ಸಾಹಿತ್ಯ ಪ್ರಕಾರದಲ್ಲಿ ರಚಿತಗೊಂಡಿರುವ ಜ್ಞಾನಯೋಗಿ ಮಹಾಗ್ರಂಥವನ್ನು ಕೇವಲ ಇಪ್ಪತ್ತೆಂಟು ದಿನಗಳಲ್ಲಿ ಮುಗಿಸಿರುವುದು ನಿಜಕ್ಕೂ ಇವರ ಅದ್ಭುತ ಜ್ಞಾನ ಭಂಡಾರಕ್ಕೆ ಕನ್ನಡಿ ಹಿಡಿದಂತೆ. ಪೂಜ್ಯ ಗುರುಗಳ ಪ್ರಬುದ್ಧತೆಗೆ ಜ್ಞಾನದ ಭಂಡಾರಕ್ಕೆ ನನ್ನ ಸಾಷ್ಟಾಂಗ ನಮನಗಳು. ಈ ಕೃತಿಯು ಒಟ್ಟು ಏಳು ಅಧ್ಯಾಯಗಳು. ಒಂದೊಂದು ಅಧ್ಯಾಯಗಳಲ್ಲೂ ಹತ್ತತ್ತು ಆಲಾಪಗಳಿದ್ದು ಅದರೊಳಗೆ ಶ್ರೀಯವರ ಜೀವನ ಮತ್ತು ಯಶೋಗಾಥೆ ಯನ್ನು ಅನುಪಮವಾಗಿ ವರ್ಣಿಸಿರುವ ಪರಿಯನ್ನು ಕಾಣಬಹುದಾಗಿದೆ.

ಮೊದಲಿಗೆ ಪೂಜ್ಯರು ಕೃತಿಯನ್ನು ರಚಿಸಲು ಕಾರಣಕರ್ತರಾದವರನ್ನು ಆಲಾಪಗಳೊಂದಿಗೆ ವಿಜ್ಞಾಪಿಸಿ ಕೊಳ್ಳುತ್ತ ಪ್ರಾರಂಭಿಸಿರುವುದು ಸಹ ಬಹಳ ವಿಶೇಷವಾಗಿದೆ. ಇಲ್ಲಿ ಕವಿಯ ಆಳವಾದ ಜ್ಞಾನ, ವಿದ್ವತ್ತು ಹಾಗೂ ಅವರ ಆಲೋಚನೆಯ ವಿನೂತನ ವಿಧಾನ ಓದುಗರೆದೆಯನ್ನು ಒಮ್ಮೆಯೇ ಸೆಳೆಯುವಂತಿರುವುದು ಅವರ ಬುದ್ಧಿಚಾತುರ್ಯವನ್ನು ಎತ್ತಿ ತೋರಿಸುವಂತಿದೆ.

ಅದರೊಳಗಿನ ಪದ್ಯ ಸಾಲು... ಅರಿಕೆಯೊಳಗೆ...

ನಡೆದಾಡುವ ದೇವರೆಂದೇ ಹೆಸರಾಗಿದ್ದ ಸ್ವಾಮೀಜಿಗಳು ಸದಾ ಶ್ವೇತವಸ್ತ್ರಧಾರಿಯಾಗಿದ್ದು ನಗುಮೊಗ ಹೊತ್ತ ಇವರು ಎಂದಿಗೂ ಹಣ, ಅಧಿಕಾರ, ಅಂತಸ್ತು, ಕೀರ್ತಿ, ಪ್ರಭಾವ ಬೀರುವ ವ್ಯಕ್ತಿತ್ವಕ್ಕೆ ಆಸೆ ಪಡದ ಮಹಾನ್ ಜ್ಞಾನಿಯ ಜೀವನಗಾಥೆಯನ್ನು ಬರೆಯುವ ಅವರ ತುಡಿತ ಮಿಡಿತಗಳನ್ನು ಸಹ ಕಾವ್ಯದ ಹೊನಲಾಗಿ ಹರಿಸಿರುವುದು ವಿಶೇಷವಾಗಿದೆ. ಇವರ ಪ್ರವಚನ ಸಾರವನ್ನು ಪ್ರಸ್ತುತಪಡಿಸಲು ಕಾರಣಕರ್ತರಾದ ರಾಜಶೇಖರ್ ಹಾಗೂ ಶಿವಪ್ರಕಾಶರು ಹಾಗೂ ಸಹಕರಿಸಿದವರೆಲ್ಲರನ್ನು ಮನಪೂರ್ವಕವಾಗಿ ಸ್ಮರಿಸುವ ಅಭೂತಪೂರ್ವ ಕಾರ್ಯವನ್ನು ಓದುಗರೆದೆಗೆ ನೇರವಾಗಿ ಅಕ್ಷರರೂಪದಲ್ಲಿ ಬಿತ್ತಿರುವ ಕವಿಗಳ ಭಕ್ತಿ ಹಾಗೂ ನಿಸ್ವಾರ್ಥ ಮನೋಧರ್ಮವನ್ನು ಕಾಣಬಹುದಾಗಿದೆ.

**ಅಧ್ಯಾಯ ೧ರಲ್ಲಿ ನೋಡುವುದಾದರೆ...**

ಬದುಕಿಗರ್ಥವ ತೋರ್ವ ವಚನಗಳ ಬೆಳಕು...

ಸಾರ್ಥಕ ಬದುಕಿನ ನೆಲೆಯನ್ನು ತಮ್ಮ ವಚನಗಳ ಸಾರದಿಂದ ಗಟ್ಟಿಗೊಳಿಸುವ ಹಾಗೂ ಸಕಾರಾತ್ಮಕ ಚಿಂತನೆಗಳು ಮಾನವನನ್ನು ಸುಖಮಯ ದಾರಿಯತ್ತ ಕೊಂಡೊಯ್ಯುವಂತೆ ಮಾಡುವುದರ ಮೂಲಕ ನಮ್ಮ ನಡೆ ನುಡಿ, ವೃತ್ತಿ, ಪ್ರವೃತ್ತಿಗಳಲ್ಲಿ ಧನಾತ್ಮಕ ಚಿಂತನೆಗಳೊಂದಿಗೆ ಸಮಾಜಮುಖಿಯಾಗಿ ವ್ಯವಹರಿಸಿದಾಗ ಬದುಕಿನ ಸಾರ್ಥಕತೆಯ ಸಾಫಲ್ಯ ಸಾಧ್ಯವಾಗುತ್ತದೆ ಎಂಬ ನಿಟ್ಟಿನಲ್ಲಿ ಈ ಅಧ್ಯಾಯವು ಅರ್ಥಪೂರ್ಣ ಜ್ಞಾನದೀವಿಗೆಯಾಗಿದೆ.

ಬಸವಣ್ಣನವರ ವಚನಗಳ ಗಟ್ಟಿತನವನ್ನು ಮನನ ಮಾಡಿಸೋ ನಿಟ್ಟಿನಲ್ಲಿ ಅವರ ಇಲ್ಲದಿರುವಿಕೆಯ ಸ್ಥಿತಿಯ ನೆನೆದು ಅವರ ವಚನಗಳ ಸಾಲಿನಲ್ಲಿ ನಮ್ಮೆದುರಿಗೆ ಸದಾ ಇರುವರೆಂಬ ಸತ್ಯದ ಅರುಹುವಿಕೆ ಹಾಗೂ ಮಾನವನಿಗೆ ಬದುಕಿನರ್ಥವನ್ನು ವಚನಗಳೆಂಬ ಸುರಬೆಳಕು ಯಾವ ರೀತಿ ಮೂಡಿಸುತ್ತವೆ ಎಂಬುದು ಸಹ ಅದ್ಭುತವಾಗಿ ಅಂದರೆ ಜನರು ಲೋಕದ ಓರೆಕೋರೆಗಳನ್ನು ತಿದ್ದುವುದರೊಂದಿಗೆ ನಮ್ಮೊಳಗಿನ ದೈನಂದಿನ ಓರೆಕೋರೆಗಳನ್ನು ತಿದ್ದಿಕೊಳ್ಳುತ್ತ ತಮ್ಮ ತಮ್ಮ ಶಾರೀರಿಕ ಮತ್ತು ಮಾನಸಿಕ ಬಯಕೆಗಳನ್ನು ಅರಿತು ಸುಲಭ ಮಾರ್ಗದಲ್ಲಿ ನಡೆಯಲು ವಚನಗಳ ಸಾರ ಹೇಗೆ ನಮ್ಮ ಬದುಕಿಗೊಂದು ಅರ್ಥ ಒದಗಿಸಿಕೊಡುತ್ತದೆ ಎಂಬುದನ್ನು ವಿವರಿಸಿದ ಪರಿ ಚೆನ್ನಾಗಿ ಮೂಡಿಬಂದಿದೆ.

ಪೂಜ್ಯ ಗುರುಗಳು, ಬಿಜ್ಜರಗಿಯು ಸಾಮರಸ್ಯ, ಸಂಸ್ಕೃತಿ, ಸಂಸ್ಕಾರಗಳ ತವರೂರು. ಅದು 'ಸರ್ವಜನಾಂಗ ತೋಟ'ವೆಂಬಂತೆ ಕವಿಯು ಬಿಂಬಿಸಿರುವ ಹೋಲಿಕೆ ಅಮೋಘವಾಗಿದೆ. ಹಾಗೆಯೇ ಇಲ್ಲಿ ಅನೇಕತೆಯಲ್ಲಿ ಏಕತೆಯನ್ನು ಬಿಂಬಿಸುತ್ತ, ಬಿಜ್ಜರಗಿ ಕನ್ನಡ ನಾಡಿಗೆ ಒಂದು ಸೊಗಸು, ಸೊಬಗು ಎಂಬುದಾಗಿ ಹೇಳಿರುವ ಕವಿಭಾವ ನಿಜಕ್ಕೂ ಅವರ ಕಲ್ಪನೆ, ಆದರ್ಶ ಬಿಜ್ಜರಗಿ ಬಗೆಗಿನ ಗೌರವವನ್ನು ಎತ್ತಿ ತೋರಿಸುತ್ತಿದೆ.

ನಾನಾ ಜಾತಿ, ಧರ್ಮ, ಪಂಥ, ಹಲವಾರು ಭಾಷೆಗಳನ್ನಾಡುವ ಜನರಿದ್ದು ನಾವೆಲ್ಲ ಒಂದೇ ಎಂಬ

ಭಾವನೆಯನ್ನು ಒಕ್ಕೊರಲಿನಿಂದ ಹೇಳಿರುವುದು ಹಾಗೆಯೇ ಬಿಜ್ಜರಗಿಯ ಕೃಷಿ, ಸಾಹಿತ್ಯ, ಗ್ರಾಮದ ಹಿನ್ನೆಲೆ, ಜನರ ಹಾಡು ಪಾಡು, ಅಲ್ಲಿಯ ಉದ್ಯೋಗ, ಜನಸಂಖ್ಯೆ, ಶಿಕ್ಷಣ ಕ್ಷೇತ್ರ ಇತ್ಯಾದಿಗಳ ಸಂಗೋಪಾದಿ ರಚನೆ ಮನವನ್ನು ರಂಜಿಸಿರುವುದು ಹಾಗೆಯೇ ಓದುಗರಿಗೆ ಮುಂದೇನೇನಿದೆ ಎಂಬ ಕುತೂಹಲವನ್ನು ಹೆಚ್ಚಿಸುವಂತಿದೆ.

**ಅಧ್ಯಾಯ-೨ :**

ನಮ್ಮ ಬದುಕಿಗೆ ಬೆಲೆ ಬರುವುದು, ಬದುಕಿನ ವೈಭವ ಹೆಚ್ಚುವುದು ಸತ್ಸಂಗದಿಂದ. ಹಾಗಾಗಿ ಬಾಳು ನಿತ್ಯ ಸುಖಮಯವಾಗಿದ್ದರೆ ಸತ್ಸಂಗದಲ್ಲಿ ಬದುಕು ಹೂವಿನಂತೆ ಅರಳುವುದೆಂದು ಸಾರಿದ ಮಹಾನ್ ಮೇಧಾವಿ. ಅದಕ್ಕಾಗಿ ನಾವು ಸತ್ಸಂಗವನ್ನೇ ಮಾಡಬೇಕು ಎಂದು ನುಡಿದು ಸರಳ ಬದುಕು ಸಾಗಿಸಿದ ಜ್ಞಾನಮಯಿ, ಬದುಕಿನ ಎಲ್ಲಾ ಆದರ್ಶಗಳ ಪರಿಪಾಲಕರಾಗಿದ್ದ ಶ್ರೀಗಳು ಭಕ್ತರ ಮನದಲ್ಲಿ ಎಂದಿಗೂ ಚಿರಾಯು. ಭಗವಾನ್ ಕೃಷ್ಣ ಮತ್ತು ಬಸವರ ರೂಪದಲ್ಲಿ ತಾವಾಗಿ ಕಂಡಂತಹ ಸೌಭಾಗ್ಯ ಇವರದ್ದಾಗಿದೆ. ಇಡೀ ವಿಶ್ವವೇ ಬೆರಗಾಗುವ ನಿಟ್ಟಿನಲ್ಲಿ ಬದುಕು ಸಾಧಿಸಿದ ಧೀಮಂತ ಯೋಗಿ. ಇವರ ಆಧ್ಯಾತ್ಮಿಕ ಪ್ರವಚನಗಳು ಸಹಸ್ರಾರು ಭಕ್ತರಿಗೆ ಮಾರ್ಗದರ್ಶನ ಹಾಗೂ ಪ್ರೇರಣೆಯಾಗಿರುವುದನ್ನು ಪೂಜ್ಯರ ಸಾಲುಗಳಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದಾಗಿದೆ. ಜ್ಞಾನಯೋಗಾಶ್ರಮದ ವರ್ಣನೆ ಅದ್ಭುತವಾಗಿ ಉತ್ತಮ ಉಪಮಾನ ಉಪಮೇಯಗಳೊಂದಿಗೆ ವಿವರಿಸುತ್ತ, ದೇವರೊಲುಮೆಯೇ ಸಿರಿ ನಿಜ ಬದುಕಿನ ಸುಖವನ್ನು ಅರುಹಿಸಿದ ಪೂಜ್ಯರು ಶ್ರೀಗಳ ಅನುಪಮ, ಅನನ್ಯ, ಅಮೋಘ ವಿಚಾರಧಾರೆಗಳನ್ನು ತಮ್ಮೀ ಕಾವ್ಯಮಾಲೆಯಲ್ಲಿ ಬಿತ್ತರಿಸಿರುವ ಈ ಕಾರ್ಯ ನಿಜಕ್ಕೂ ಜನಮನಕ್ಕೆ ಸಾನಂದವಾಯಿತು. ಶ್ರೀಗಳ ಜ್ಞಾನ ಬೋಧನೆಯ ಲಾಭ ಪಡೆದು ಸನ್ಮಾರ್ಗದಲ್ಲಿ ನಡೆಯಿರಿ ಎಂದ್ಹೇಳುತ್ತ ಇಂತಹ ಮಹಾನ್ ಜ್ಞಾನಿಯ ಜ್ಞಾನ ಸುಧೆಯ ಬೆಳಕಿನಲ್ಲಿ ಎಲ್ಲರೂ ಮುನ್ನಡೆಯುವ ಅಗತ್ಯವಿದ್ದು, ಇದುವೇ ಅವರಿಗೆ ನಾವು ಸಲ್ಲಿಸುವ ನಿಜವಾದ ಗೌರವ ಎಂದು ಆಧ್ಯಾತ್ಮ. ಆದರ್ಶ ಮತ್ತು ನೈತಿಕತೆ ಬಗ್ಗೆ ಕೇವಲ ಬೋಧನೆ ಮಾಡುವುದಷ್ಟೇ ಅಲ್ಲ, ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ನುಡಿದಂತೆ ನಡೆಯುವ ಮತ್ತು ನಡೆದಂತೆಯೇ ನುಡಿಯುವ ವ್ಯಕ್ತಿತ್ವವನ್ನು ಎಲ್ಲರು ಪಾಲಿಸುವಂತಾಗಲಿ ಎಂದು ಅರುಹುತ್ತ ತಮ್ಮ ಎರಡನೆ ಅಧ್ಯಾಯದಲ್ಲಿ ಶ್ರೀಗಳ ಹೆಸರನ್ನು ಅಭಿಧಾನಗೊಳಿಸುತ್ತ ಅಭಿವ್ಯಂಜಿಸಿರುವ ಪೂಜ್ಯರ ಪರಿ ಬಹಳ ಸೂಚ್ಯವಾಗಿದೆ.

**ಅಧ್ಯಾಯ-೩ :**

ಎತ್ತರದ ಮತ್ತು ಭವ್ಯವಾದ ವ್ಯಕ್ತಿತ್ವ ಹೊಂದಿದ್ದ ಸ್ವಾಮೀಜಿಯವರು ತಮ್ಮ ಆಧ್ಯಾತ್ಮಿಕ ಗುರುಗಳಾದ ಮಲ್ಲಿಕಾರ್ಜುನ ಸ್ವಾಮಿಗಳು ದಯಪಾಲಿಸಿದ ವೇದಾಂತಿಕ ಬುದ್ಧಿವಂತಿಕೆಯ ಅವತಾರ ಎಂಬುದನ್ನು ಪೂಜ್ಯರು ಬಹಳ ವಿನೀತದಿಂದ ಹಾಗೂ ಹೆಮ್ಮೆಯಿಂದ ಹೇಳಿರುವರು. ಮಾನವೀಯತೆ ಕಲ್ಯಾಣ ಮತ್ತು ಯೋಗಕ್ಷೇಮಕ್ಕಾಗಿ ವೇದಾಂತದ ಬುದ್ಧಿವಂತಿಕೆ ಹಾಗೂ ಜ್ಞಾನವನ್ನು ಬಿತ್ತುವ ಅವರ ಧ್ಯೇಯದ ಸಾಲುಗಳ ರಂಗೋಲಿಯನ್ನೇ ಸರ್ವರ ಹೃದಯದಲ್ಲಿ ಬಿಡಿಸಿರುವರು. ಪ್ರತಿಯೊಬ್ಬರಲ್ಲೂ ಆತ್ಮವಿಶ್ವಾಸವಿದ್ದರಷ್ಟೇ ಬದುಕಿನಲ್ಲಿ ಸಾಧನೆಯನ್ನು ಸಾಧಿಸಬಹುದು ಎಂಬುದನ್ನು ಬಹಳ ಸೂಕ್ಷ್ಮವಾಗಿ ಶ್ರೀಗಳ ಪ್ರವಚನ ಸಾರದಲ್ಲಿ ಮನಮುಟ್ಟುವಂತೆ ಅರುಹಿದ ಬಗ್ಗೆ ನಿಜಕ್ಕೂ ಅದ್ವಿತೀಯವಾಗಿದೆ. ಭಗವಂತನಲ್ಲಿ ಹಾಗೂ ನಮ್ಮೊಳಗೆ ನಮಗೆ ವಿಶ್ವಾಸವಿರಬೇಕು. ಜೊತೆಗೆ ಕಾಣುವ ವಸ್ತು, ಕಾಣದ ಭಗವಂತನಲ್ಲಿ ವಿಶ್ವಾಸ ಇಡಬೇಕು. ಬೆಳೆಯುವ, ಬೆಳೆಸುವ ಶಕ್ತಿಯ ಮೇಲೆ ನಾವು ವಿಶ್ವಾಸ ಹೊಂದಿರಬೇಕು ಅಷ್ಟೇ. ಇದರಿಂದ ಅನುಭಾವ, ಭಕ್ತಿ, ನಿಷ್ಠೆ, ಶ್ರದ್ಧಾಭಾವ, ಸಮಯಪಾಲನೆ ವಿಕಾಸವಾಗುತ್ತದೆ. ಏಕೆಂದರೆ ಜಗತ್ತೇ ವಿಶ್ವಾಸದ ಮೇಲೆ ನಿಂತಿದೆ ಎಂಬ ಅವರ ಪ್ರವಚನ ಸಾರವನ್ನು ತಮ್ಮ ಲೇಖನಿಯಲ್ಲಿ ಸೊಗಸಾಗಿ ವರ್ಣಿಸಿರುವರು. ಶ್ರೀಗಳ ಸರಳತೆ ವರ್ಣಿಸಲಸದಳ. ಎಷ್ಟೇ ಜ್ಞಾನವಿದ್ದರೂ ಅಹಂವಿಲ್ಲದ ನಿಗರ್ವಿ. ಅಂಗಿಯೂ ಅಲ್ಲದ ಜುಬ್ಬವೂ ಅಲ್ಲದ ಬಿಳಿ ಉಡುಗೆ ಅದು ಕಿಸೆಯಿಲ್ಲದ ಅಂಗಿ, ಪಂಚೆ ಹಾಗೂ ಹೆಗಲ ಮೇಲೊಂದು ಬಿಳಿ ವಲ್ಲಿಯಲ್ಲಿ ಬದುಕಿನ ಕಡೆಯವರೆಗೂ ಇದ್ದು ಬದುಕಲು ಮಾತ್ರ ಆಹಾರ ಸೇವಿಸುತ್ತಿದ್ದ ಅವರೊಬ್ಬ ಭಾರತದ ಅಸಂಖ್ಯಾತ ಬಡವರ ಪ್ರತಿನಿಧಿಯಂತೆ ಕಂಡು, ಬಯಲನು ಬೆಳಗನು ಬೆಳಕ ಬಿತ್ತಿದ ಪುಣ್ಯಾತ್ಮರ ನಡೆ ನುಡಿ ಸತ್ಪಥಗಳ ಧೀಮಂತ ವ್ಯಕ್ತಿತ್ವವನ್ನು ತಮ್ಮ ಕಾವ್ಯದಲ್ಲಿ ಬಹಳ ಅಚ್ಚುಕಟ್ಟಾಗಿ ಬರೆದಿರುವ ಪೂಜ್ಯರು ತಮ್ಮಲ್ಲಿನ ಇಂತಹ ಸೊಗಸಾದ ಅರ್ಥಪೂರ್ಣವಾದ ಬರವಣಿಗೆಯಿಂದಲೇ ಓದುಗರಿಗೆ ಅಚ್ಚುಮೆಚ್ಚಾಗಿರುವರು.

ಪೂಜ್ಯರನ್ನು ಅವರ ಬರೆಹದ ಶೈಲಿ ಹಾಗೂ ಅರ್ಥಪೂರ್ಣತೆಯು ಓದುಗರೆದೆಯಲಿ ಆಳವಾಗಿ ನಿಲ್ಲುವಂತೆ ಮಾಡಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ಈ ಕೃತಿಯಲ್ಲಿರುವ ಎಲ್ಲಾ ಕವನಗಳು ಹೊಸ ಬಗೆಯ ರಂಗು ರಂಗಿನ ಚಿತ್ತಾರಗಳಿಂದ ಆಕರ್ಷಿಸುತ ಕುತೂಹಲ ಕೆರಳಿಸುವಂತಿವೆ.

ಪರಿಸರದಲ್ಲಿನ ಪ್ರಜ್ಞೆ ಉದ್ದೀಪನಗೊಳಿಸಿ ವಿನೂತವಾಗಿ ಆಲೋಚಿಸುತ್ತಾ ಹೊಸ ಭಾವಾರ್ಥದ ಸೃಷ್ಟಿ ವೃಷ್ಟಿಯನ್ನು ಹರಿಸುವಂತಿದೆ. ಹಾಗೆಯೇ ಸಿದ್ದೇಶ್ವರ ಸ್ವಾಮೀಜಿಯ ಯಾವ ವಿಷಯವು ಕೈತಪ್ಪದಂತೆ ಕವನರೂಪದಲ್ಲಿ ತುಂಬಾ ಚೆನ್ನಾಗಿ ಬಿಂಬಿತಪಡಿಸಿರುವರು. ಇಲ್ಲಿ ಕವಿಭಾವಕ್ಕೆ ತಕ್ಕಂತೆ ಅವರ ಹರಿತವಾದ ಲೇಖನಿ ಅದ್ಭುತ ಚಮತ್ಕಾರವನ್ನೇ ಮಾಡಿದೆ.

ಅತ್ಯಂತ ಸರಳ ಸಜ್ಜನಿಕೆಯ ಸಾಕಾರಮೂರ್ತಿಯಾಗಿದ್ದ ಶ್ರೀಗಳವರು ನನ್ನದು-ತನ್ನದೆಂಬ ಮಮಕಾರ ತೊರೆದ ಮಹಾಪುರುಷರ ಅದ್ಭುತ ಚಿತ್ರಣ ಕವಿಗಳ ಕರಗಳಿಂದ ಹಾಡಾಗಿ ಹರಿದಿರುವುದನ್ನು ಓದಿ ಖುಷಿಯಾಯ್ತು. ಜ್ಞಾನೋಪಾಸಕರು, ಸಂತರು, ಜ್ಞಾನಯೋಗಿಗಳು ಹುಟ್ಟಿದ ಊರು ಬಿಜ್ಜರಗಿ ನಿಜಕ್ಕೂ ಪಾವನ ಭೂಮಿ. ಪತಿತ ಪಾವನದಂತೆಯೇ ವರ್ಣಿತವಾಗಿರುವುದನ್ನು ಕಂಡು ಮನ ತುಂಬಾ ಹರ್ಷಿತಗೊಂಡಿತು. ಹಾಗೆಯೇ ಈ ಕೃತಿಯೊಳಗೆ ಮೂಡಿಬಂದಿರುವ ಸ್ವಾಮೀಜಿಯವರ ಜೀವನ ಸಾಧನೆಗಳು ವಿನೂತನ. ವಿಶೇಷ ಸಾಲುಗಳಿಂದ ಮೇಳೈಸುವಂತಿದೆ. ಇಡೀ ಗ್ರಂಥದೊಳಗಿನ ಎಲ್ಲಾ ಸಾಲುಗಳು ಎಲ್ಲಿಯೂ ಲಯ ತಪ್ಪದಂತೆ ಸಾಗಿರುವುದು ತುಂಬಾ ಸೊಗಸಾಗಿದೆ. ಈ ಮಹಾಕೃತಿಯೊಳಗೆ ಆಧ್ಯಾತ್ಮ, ವಿಡಂಬನೆ, ಭಕ್ತಿ, ಸುಧಾರಣೆ, ಜ್ಞಾನ ಪಿಪಾಸೆ, ಆತ್ಮವಿಶ್ವಾಸ, ಆತ್ಮಸಾಕ್ಷಾತ್ಕಾರ, ಆತ್ಮಪ್ರಜ್ಞೆ, ಆತ್ಮತೃಪ್ತಿ ಇತ್ಯಾದಿ ವಿಷಯಗಳು ಅದ್ಭುತವಾಗಿ ಮೂಡಿಬಂದಿದ್ದು ಮುಕ್ತಛಂದಸ್ಸು, ರಗಳೆ, ಷಟ್ಪದಿ, ಮುಕ್ತಕಗಳು.

ಅಲಂಕಾರಗಳನ್ನು ಬಳಸಿಕೊಂಡು ಉಪಮೆಗಳ ಓಳಿ, ದೃಷ್ಟಾಂತಗಳ ಪಂಕ್ತಿ ಹೀಗೆ ಅವರ ಸಾಲುಗಳು ಸರಾಗವಾಗಿ ಎಲ್ಲಿಯೂ ಅರ್ಥಲೋಪವಾಗದಂತೆ ಸಾಗುತ್ತ ಓದುಗರಿಗೆ ಮುಂಜಾವಿನ ಹೊಂಗಿರಣಗಳು ಸ್ಪರ್ಶಿಸುವಂತೆ ಹೃನ್ಮನಗಳನ್ನು ಕಂಗೊಳಿಸುತ್ತ ಸಂದರ್ಶಿಸುವಂತಿರುವುದನ್ನು ಕಾಣಬಹುದಾಗಿದೆ.

**ಅಧ್ಯಾಯ-೪ :**

ಸವಿ ಸಿರಿಯ ದರುಶನದಲಿ ದೇವರ ರೂಪವದು ಮನದೊಳಗೆ ನೆಲೆನಿಂತು, ಸಿದ್ದೇಶ್ವರ ಶ್ರೀಗಳು ತಮ್ಮ ಪ್ರವಚನದ ಮೂಲಕ ಸವಿಸ್ತಾರವನ್ನೇ ಪ್ರವಚಿಸಿ ಅದೆಷ್ಟೋ ಜನರ ಬದುಕು ಬದಲಿಸಿ ಬದುಕುವ ಕಲೆಯನ್ನು ಬಿತ್ತರಿಸಿದ ಪರಿ ಬದುಕನ್ನು ಹೇಗೆ ನಡೆಸಬೇಕು, ಯಾವ ದಾರಿಯನ್ನು ಕಂಡುಕೊಳ್ಳಬೇಕು. ಸಾರ್ಥಕ್ಯ ಬದುಕು ಹೇಗಿರುತ್ತದೆ. ನಿಸ್ವಾರ್ಥ ಜೀವನದ ಹಾದಿ ಹೇಗಿರಬೇಕು ಎಂಬುದನ್ನು ತುಂಬ ಅರ್ಥಪೂರ್ಣವಾಗಿ ತಮ್ಮ ಪ್ರವಚನಗಳನ್ನು ಮಾಡಿ ಆ ಮುಖೇನ ಲಕ್ಷಾಂತರ ಭಾರತೀಯರನ್ನು ಬದಲಾಯಿಸಿದ ಬಗ್ಗೆ, ಅವರ ಸರಳತೆ, ಯೋಗದ ಮನೋಭಾವಗಳು, ಸಹಾನುಭೂತಿ, ಆಧ್ಯಾತ್ಮಿಕ ಸಮಸ್ಯೆಗಳಿಗೆ ಸೃಜನಶೀಲ ವಿಧಾನ ಮತ್ತು ಹೋಲಿಸಲಾಗದ ಶಾಂತ ಮತ್ತು ಸಂಯೋಜನೆಯ ವ್ಯಕ್ತಿತ್ವ. ಅವರಿಗೆ ಜನರ ಬದುಕಿನ ಮೇಲೆ ಅಪಾರ ಪ್ರಭಾವ ಬೀರಿದ ಬಗ್ಗೆ ಹಾಗೂ ಸ್ವಾಮೀಜಿಯವರ ಸ್ಫೂರ್ತಿದಾಯಕ ನುಡಿಗಳು ಜೀವನ ಶೈಲಿ, ಸರಳತೆ ಸರ್ವರಿಗೂ ಮಾದರಿ. ಅವರ ಹಿತನುಡಿಗಳು ಸಾರ್ಥಕ ಜೀವನಕ್ಕೆ ಹೇಗೆ ಅರ್ಥಪೂರ್ಣ ಎಂಬುದರ ಮಾಹಿತಿ ನಮ್ಮ ಜೀವನದಲ್ಲಿ ಬಂದದ್ದನ್ನು ಸ್ವೀಕರಿಸುವುದೇ ಮಾನವ ಧರ್ಮ. ವಿರಕ್ತಿ, ವಿರಾಗದ ನಿಜ ತತ್ವಗಳು, ತಾಯಿ, ತಂದೆ, ಅತಿಥಿ, ಆಚಾರ್ಯರಲಿ ವಿರಾಗ ಕಂಡು ವಿರಾಗದಲಿ ದೇವರ ದರ್ಶನದಿಂದ ಸಾಕ್ಷಾತ್ಕಾರ ಪಡೆವ ಪರಿ ಸೊಗಸಾಗಿದೆ. ನಿತ್ಯವು ನಿಂತಾಗ, ಕೂತಾಗ, ನಡೆವಾಗ, ನುಡಿವಾಗ ದೇವರ ಚಿಂತನೆಗಳನ್ನು ಮಾಡುತ್ತಿದ್ದರೆ ಖಂಡಿತ ಭಗವಂತ ಸಾಕ್ಷಾತ್ಕಾರವಾಗುವುದೆಂಬ ಸತ್ಯಭಕ್ತಿ, ಯೋಗಿ, ಜ್ಞಾನಿ, ಶ್ರೇಷ್ಠ, ಕನಿಷ್ಟಗಳೆಂಬ ಹೋಲಿಕೆ ಸಲ್ಲದು. ಶುದ್ಧ ಮನ, ಶುದ್ಧ ಭಕ್ತಿಯಿರುವ ಹೃದಯದಿ ಅನಿಕೇತನ ಪರಮಾತ್ಮ ಬರುವನು ದೇವನನ್ನು ಕಾಣಲು ಭಕ್ತಿಯ ಮಧುರಮಾರ್ಗ ಸೂಕ್ತತೆಯ ಅರಿವು. ಇಲ್ಲಿ ಧ್ಯಾನಯೋಗದ ಚಿಂತನೆಯ ಮಾರ್ಗ ಸೊಗಸಾಗಿ ಮೂಡಿಬಂದಿದೆ. ಕಾಯಕ ಯೋಗವೇ ಪ್ರಸನ್ನತಾ ಪ್ರಸಾದವೆಂದು ಪೂಜ್ಯರು ಅದ್ಭುತವಾಗಿ ಅರುಹಿದರು.

**ಅಧ್ಯಾಯ-೫ :**

ಸಿದ್ದೇಶ್ವರ ಶ್ರೀಗಳ ಕೃತಿಯಲ್ಲಿನ ಕಥೆಗಳನ್ನು ಪೂಜ್ಯರು ತಮ್ಮ ಲೇಖನಿಯಲ್ಲಿ ಮೂಡಿಸಿರುವ ಪರಿಯೇ ಒಂಥರ ಪುಳಕವಾಗುವುದು. ಅವುಗಳೊಳಗಿನ ದಿವ್ಯಾನುಭವವನ್ನು

ಉಣಬಡಿಸುತ್ತ ಕಥೆಗಳ ಸಾರ ಹೃದಯದಲ್ಲಿ ಉಳಿಯುವಂತೆ ಮಾಡಿರುವರು. ಅವರ ಸತ್ಪಥಗಳ ಚಿಂತನೆ, ಶಿವಪಥದ ಕಥೆಗಳು, ಪೂರ್ಣಯೋಗದ ಕಥೆಗಳ ರೋಮಾಂಚನದ ನೋಟ ಬದುಕು ಭಗವಂತನಿತ್ತ ಅಮೂಲ್ಯ ಕಾಣಿಕೆ. ಸದ್ಭಾವ, ಸತ್ಕಾರ್ಯ, ಯೋಗ ಗುಣವ ಸಂಪದವಿರಲು ಇಹಪರದಿ ಸೌಖ್ಯ, ಶ್ರದ್ಧೆ, ಶಾಂತಿಯಿಂದ ಸಾಗಿದರೆ ಬದುಕಿನ ಪಯಣ ಒಳಿತು. ಸಾಧನಾಪಥದಲ್ಲಿ ಸಫಲತೆಯ ಮೆಟ್ಟಲು ಭಕ್ತಿಯೋಗದಿಂದ ಜಗದೊಳಗಿನ ಪರಮ ಸತ್ಯದ ಅರಿವುಗಳನ್ನು ಅದ್ಭುತವಾಗಿ ತಮ್ಮ ಕಾವ್ಯಾಮೃತದಲ್ಲಿ ಪ್ರಸ್ತುತಪಡಿಸಿರುವ ಪೂಜ್ಯರ ಈ ಕಾರ್ಯಕ್ಕೆ ಹೃದ್ಯ ವಂದನೆಗಳು.

### ಅಧ್ಯಾಯ–೬ :

ಶಿವಪಥದಲ್ಲೇ ತಮ್ಮ ಬದುಕನ್ನು ಸವೆಸಿದ ನಿಸ್ವಾರ್ಥ ಸರಳ ಸಜ್ಜನಿಕೆಯ ಮೂರ್ತಿ. ಮಹಾಪುರುಷ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಮಾನವ ಚೈತನ್ಯದ ಅಸಾಧಾರಣ ರೂಪವೆನಿಸಿದ ಬಗ್ಗೆ ಅವರ ಶಾಂತ ಮೃದು ಸ್ವಭಾವ ಹಾಗೆಯೇ ಸಂತರಷ್ಟೇ ಅಲ್ಲ, ಜ್ಞಾನೋಪಾಸಕರು ಕೂಡ ಆಗಿದ್ದು, ನಿಸ್ವಾರ್ಥ ಸೇವೆ, ಮಮಕಾರಗಳಿಲ್ಲದೆ ಯಾರ ಹಂಗಿಗೂ ಒಳಗಾಗದೆ ಸರ್ವಜನರಿಂದಲೂ ಪ್ರೀತಿ, ವಿಶ್ವಾಸದ ಆಶ್ರಯತಾಣವಾಗಿ ಬೆಳೆದು ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಪ್ರವಚನದ ಮೂಲಕ ಜನರಲ್ಲಿ ಜ್ಞಾನದ ಜ್ಯೋತಿಯನ್ನು ಬೆಳಗಿದ ಮಹಾಜ್ಯೋತಿಯ ಪ್ರಜ್ವಲಿಸುವಿಕೆಯ ರೂಪದ ಅನಾವರಣ ಅದ್ವಿತೀಯವಾಗಿದೆ.

ಸ್ವಾಮೀಜಿಯವರ ಯೋಗದ ಮನೋಭಾವ, ಸಹಾನುಭೂತಿ, ಆಧ್ಯಾತ್ಮಿಕ ಸಮಸ್ಯೆಗಳಿಗೆ ಸೃಜನಶೀಲ ವಿಧಾನ ಮತ್ತು ಅವರ ಹೋಲಿಸಲಾಗದ ಶಾಂತ ಮತ್ತು ಸಂಯೋಜನೆಯ ನಿಟ್ಟಿನಲ್ಲಿ ಪ್ರೇಕ್ಷಕರ ಉತ್ಸಾಹ ಮತ್ತು ಪ್ರಬುದ್ಧತೆಯಲ್ಲಿ ಅವರ ಪ್ರವಚನದಿಂದ ನಿಜವಾದ ಜ್ಞಾನದರಿವು ಮತ್ತು ನುಗ್ಗುವಿಕೆಗೆ ಹೆಸರುವಾಸಿಯಾಗಿದ್ದನ್ನು ಸುಂದರವಾಗಿ ಪ್ರಚುರಪಡಿಸುವರು. ಸಮಯ ಪರಿಪಾಲನೆಯಲ್ಲಿ ಅವರಿಗೆ ಅವರೇ ಸಾಟಿ ಎಂಬುದನ್ನು ತಮ್ಮ ಸಾಲುಗಳಲ್ಲಿ ಬಹಳ ಸೊಗಸಾಗಿ ಮೇಳೈಸಿರುವರು. ಗುರುಗಳಾದ ಮಲ್ಲಿಕಾರ್ಜುನ ಸ್ವಾಮಿಗಳು ಸಿದ್ದೇಶ್ವರರ ಸತ್ಯ ನಡೆ ಸತ್ಯನುಡಿಗಳನ್ನು ಮೆಚ್ಚುತ್ತಿದ್ದು ಅವರ ಜ್ಞಾನ, ಆಧ್ಯಾತ್ಮದ ಜೊತೆಗೆ ಲೌಕಿಕ ವಿಷಯಗಳ ಪರಿಜ್ಞಾನವಿದೆ ಎಂಬುದನ್ನು ಅರಿತು ಭವಿಷ್ಯದಲ್ಲಿ ವಿಶ್ವಕ್ಕೆ ದೊಡ್ಡವನಾಗುತ್ತಾನೆ ಎಂಬುದನ್ನು ಪೂಜ್ಯರು ಹಲವಾರು ಉಪಮಾನಗಳ ಮೂಲಕ ಮೂಡಿಸಿದ್ದು, ಪ್ರತಿಸಾಲುಗಳು ಉನ್ನತವಾದ ಸ್ಥಾನವನ್ನು ಪಡೆದುಕೊಂಡಿರುವುದನ್ನು ನೋಡಬಹುದಾಗಿದೆ.

ಜ್ಞಾನಯೋಗಾಶ್ರಮದ ಪೂಜ್ಯ ಗುರುಗಳಾಗಿದ್ದು, ಈ ವಿಚಾರದಲ್ಲೂ ಅವರ ಬದುಕು ಎಲ್ಲರಿಗೂ ಮಾದರಿ ಹಾಗೂ ಅವರ ಆಳವಾದ ಜ್ಞಾನ ಗೋಚರಿಸುವಂತದ್ದೇ. ಹಾಗೆಯೇ ಅವರನ್ನು ಬಲ್ಲ ಎಲ್ಲರಿಗೂ ವೇದ್ಯವಾದ ವಿಚಾರ ವಾಗಿರುವುದನ್ನೂ ಸಹ ತಿಳಿಸುತ್ತ ಆಧ್ಯಾತ್ಮಿಕ ಪ್ರವಚನಕಾರ, ಜ್ಞಾನಯೋಗಾಶ್ರಮದ ಶ್ರೀಗಳು ಪಂಚಭೂತಗಳಲ್ಲಿ ಲೀನರಾದ ಬಗ್ಗೆ, ಮಾತನಾಡುತ್ತಾ ಅಪಾರ ಭಕ್ತಸಮೂಹವನ್ನು ಅನಾಥರನ್ನಾಗಿಸಿ ತೆರಳಿರುವ ಶತಮಾನದ ಸಂತ ಜಗದಗಲ ಮುಗಿಲಗಲ ಜನ ಪ್ರೀತಿ ಗಳಿಸಿದ ಸಂತರ ಅಂತ್ಯಕ್ರಿಯೆಯ ಕಾರ್ಯಗಳ ತಿಳಿಸಿ ನಿಸ್ವಾರ್ಥ ಸೇವೆ. ಮಮಕಾರಗಳಿಲ್ಲದೆ, ಯಾರ ಹಂಗಿಗೂ ಒಳಗಾಗದೆ ಬದುಕಿದ ಸಾರ್ಥಕ ಜೀವಿ ಸಿದ್ಧೇಶ್ವರ ಶ್ರೀಗಳವರ ಸದಾಶಯವನ್ನು ಯಥಾವತ್ತಾಗಿ ಕಾವ್ಯದ ಮುಖೇನ ಜನಸಮೂಹಕ್ಕೆ ಮನಮುಟ್ಟುವಂತೆ ಅರುಹಿರುವರು.

### ಅಧ್ಯಾಯ–೭ :

ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಸರಳತೆಯ ಬದುಕು ನಮಗೆಲ್ಲರಿಗೂ ಹೇಗೆ ಸದಾಕಾಲ ಪ್ರೇರಣಾದಾಯಕ ವಾಗಿದೆ ಎಂಬುದರ ವಿಶ್ಲೇಷಣೆ ವಿಚಾರ ವಿನಿಮಯ ವಿಮರ್ಶಾತ್ಮಕ ನುಡಿಗಳು ನಿಜಕ್ಕೂ ಅರ್ಥಪೂರ್ಣವಾಗಿವೆ. ಶ್ರೀಗಳು ಕ್ಲಿಷ್ಟಕರವಾದ ಗ್ರಂಥಗಳನ್ನು ಅತ್ಯಂತ ಸರಳ ಭಾಷೆಯಲ್ಲಿ ಜನಸಾಮಾನ್ಯರ ಮನೆಮನಗಳನ್ನು ತಲುಪಿಸುವಲ್ಲಿ ಶ್ರೀಗಳ ಪರಿಶ್ರಮ ಎಂತಿತ್ತು ಹಾಗೂ ಅವರ ಜ್ಞಾನ ವೈಶಾಲ್ಯತೆ ಹೇಗಿತ್ತು? ದೊಡ್ಡ ವ್ಯಕ್ತಿಯಾಗಿದ್ದರು ಸಹ ಸಾಮಾನ್ಯ ಮನುಷ್ಯರಂತೆ ಬದುಕಿನ ಸಂತರ ಬಗೆಗಿನ ಸವಿಸ್ತಾರ ಮಾಹಿತಿ ಮತ್ತು ಕೋಟಿಗೊಬ್ಬರಂತೆ ರಾರಾಜಿಸಿದ ಮಹಾಯೋಗಿಯ ಬಗ್ಗೆ ಬಹಳ ಸೊಗಸಾದ ಪದಗಳಿಂದ ಹಾಡಿ ಹೊಗಳಿರುವ ಕಲೆ ಪೂಜ್ಯರಿಗೆ ಸಿದ್ಧವಾಗಿದೆ. ಇಂತಹ ಜ್ಞಾನದೀಪ್ತಿಯ ಬಗ್ಗೆ ಮುಂದುವರಿದು ಇವರೊಬ್ಬ ಮಾನವ ಕುಲಕೋಟಿಗೆ ಸುಜ್ಞಾನದ ಬೆಳಕಾಗಿ ಬದುಕಿದವರು. ನಮ್ಮ

ಬದುಕಿನ ಶಿಲ್ಪಿ ನಾವಾಗಿದ್ದರೆ ಒಳಿತು ಎಂಬ ಬಾಳಿನರ್ಥದ ಬಗ್ಗೆ ಬಹಳ ಮಾರ್ಮಿಕವಾಗಿ ಅರುಹಿರುವ ಕಾವ್ಯ ಕರ್ತೃಗಳು ಕೂಡ ನನ್ನ ದೃಷ್ಟಿಯಲ್ಲಿ ಚಿತ್ರಭೆ ಕೂಡ. ಶ್ರೀಗಳ ಒಂದೊಂದು ಪ್ರವಚನಗಳು ಅದ್ಭುತ, ವಿಶಿಷ್ಟ, ವಿಶೇಷವಾಗಿದ್ದು ಬಾಳ ದೀವಿಗೆಯಾಗಿ ಬೆಳಕನ್ನು ಹರಿಸುತ್ತಿರುವ ರೀತಿಯನ್ನು ತಿಳಿಸಿದ ಪರಿ ಹಾಗೂ ಶ್ರೀಗಳ ಸಾವಿರಾರು ನುಡಿಗಳು ಓದುಗರ ಎದೆಬಯಲನ್ನು ಉತ್ಕೃಷ್ಟವಾಗಿ ಆಳುತ್ತಿದ್ದು, ಈ ಕೃತಿಯ ಮೂಲಕ ಅದ್ಭುತವಾಗಿ ಬಿಂಬಿಸಿರುವುದನ್ನು ತಿಳಿಯಬಹುದಾಗಿದೆ.

ಹಾಗೆಯೇ ಕಿಂಚಿತ್ತೂ ಅಹಂ ತೋರದ ನಿಗರ್ವಿ, ಯಾರಿಗೂ ನೋವನ್ನುಂಟು ಮಾಡದೆ ಎಲ್ಲರ ಮನವನ್ನು ಗೆದ್ದು ನಾವು ಮಾಡುವ ಸಾಧನೆ ನಮ್ಮ ಬದುಕನ್ನು ಸದ್ಭಾವ, ಸಮೃದ್ಧಿಗೊಳಿಸುವುದೆಂದೇಳಿದ ಜ್ಞಾನ ಮಾಂತ್ರಿಕ.

ದೇದೀಪ್ಯಮಾನವಾದ ಧ್ರುವತಾರೆಯಾಗಿಯೇ ಮಿನುಗಿದ ಶ್ರೀಗಳ ಬಗ್ಗೆ ಗುರುದೇವನಿಗೆ ಶಿವಭಕ್ತಿಯ ರಸರೂಪವನ್ನು ನೀಡುತಲಿ ಎಲ್ಲರೆದೆ ಕಮಲದಲಿ ನಿಜದಾತ್ಮ ಬಂಧುವಾಗಿ ನೆಲೆಸಿರುವ ಈ ಸಂತನ ಬಗ್ಗೆ ಚಂದದ ಪದಪುಂಜಗಳಿಂದಲೇ ಅಭಿಷೇಕ ಮಾಡಿರುವರು. ಲೋಕಕಲ್ಯಾಣಕ್ಕೆ ಮಾಂತ್ರಿಕತೆಯ ಮೆರುಗು ನೀಡಿ, ತಮ್ಮವರೇ ಎನಿಸಿದರು ಬಸವ, ಕೃಷ್ಣ, ಅಲ್ಲಮರ ಮೈದುಂಬಿ ಎಳೆನಗೆಯ ಸಿದ್ಧೇಶ್ವರ ಭಾವೈಕ್ಯತೆಯನ್ನು ಸಾರಿದ ನಿಜದಾತ್ಮ ಬಂಧುವಿನ ಬಗ್ಗೆ ಓದುತ್ತಿದ್ದರೆ ಎಂತವರ ಎದೆಬಯಲು ಕೂಡ ಹಾಯ್ ಎನಿಸಿದರದು ಏನನ್ನು ಬಯಸದ ನಿಷ್ಕಲ್ಮಶ ಹಾಗೂ ನಿಸ್ವಾರ್ಥ ಭಾವದ ತೇರು ಈ ಪೂಜ್ಯ ಶ್ರೀಗಳ ಬಗೆ ಬರೆಯುತ್ತಲೇ ಅದರ ಹತ್ತಾರು ಜ್ಞಾನದೀವಿಗೆಯಂತಿರುವ ಕೃತಿಗಳ ಹಾಗೂ ಅವರ ಪ್ರಥಮ ಕೃತಿ ಹತ್ತೊಂಬತ್ತರ ಹರೆಯದಲಿ ಗುರು ಶ್ರೀ ಮಲ್ಲಿಕಾರ್ಜುನರ ಬಗ್ಗೆ ಸದ್ಗ್ರಂಥವನ್ನು ಬರೆದು ದೇಶವಿದೇಶಗಳಲ್ಲಿ ಪ್ರವಚನ ಮಾಡುತ್ತ ಎಲ್ಲೆಡೆ ಖ್ಯಾತಿಯಾದ ಮಹಾ ಸಂತನ ವಿಚಾರಧಾರೆ ಹೇಳಿದರಷ್ಟೇ ಸಾಲದು. ಈ ಸದ್ಗ್ರಂಥವನ್ನು ಪ್ರತಿಯೊಬ್ಬರು ಓದಬೇಕು. ಇಂತಹ ಮಹಾನ್ ಜ್ಞಾನಿಯ ಜ್ಞಾನಸುಧೆಯ ಬೆಳಕಿನಲ್ಲಿ ಎಲ್ಲರೂ ಮುನ್ನಡೆಯುವ ಅಗತ್ಯವಿದ್ದು, ಇದುವೇ ಅವರಿಗೆ ನಾವು ಸಲ್ಲಿಸುವ ನಿಜವಾದ ಗೌರವ ಎಂದು ಶತಮಾನದ ಸಂತ, ದೇಶ ಕಂಡ ಎರಡನೇ ವಿವೇಕಾನಂದರು ಎಂದೆಲ್ಲ ಕೊಂಡಾಡಿ ಜನಮಾನಸದೊಳಗೆ ಜ್ಞಾನ ಯೋಗಾಶ್ರಮದ ಮಂದಹಾಸದ ಚೆಲುವು ಎಂದಿಗೂ ಮರೆಯಲಾಗದ ಮಾಣಿಕ್ಯವಾಗಿದ್ದಾರೆ.

ಶ್ರೀಗಳವರ ಜೀವನದ ಯಶೋಗಾಥೆಯನ್ನು ತಮ್ಮದೇ ಆದ ಸಾಹಿತ್ಯ ಪ್ರಕಾರದಲ್ಲಿ ವಿಶಿಷ್ಟ, ವಿಭಿನ್ನವಾಗಿ ರಚಿಸಿರುವ ಕಾವ್ಯಾಮೃತವನ್ನು ನೋಡಿದರೆ ಎಂತವರಿಗೂ ಓದುವ ಎದೆ ಹಂಬಲ ಹೆಚ್ಚುವುದಂತೂ ಸತ್ಯ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಚಿತ್ರಭೆಯಾಗಿ ಬೆಳಗುತ್ತಿರುವ ವಿದ್ವತ್ಪೂರ್ಣ ಕವಿಗಳು. ನಿಮ್ಮಿಂದ ಮತ್ತಷ್ಟು ಮಗದಷ್ಟು ಗ್ರಂಥಗಳು ಬರುತಿರಲೆಂದು ಆಶಿಸುವೆ ಸರ್. ಹಾಗೆಯೇ ಈ ಒಂದು ಸದ್ಗ್ರಂಥಕ್ಕೆ ಸುತ್ತೂರು ಕ್ಷೇತ್ರದ ಜಗದ್ಗುರು ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮೀಜಿಯವರ ಶುಭಾಶೀರ್ವಾದದ ಚೆನ್ನುಡಿ ಮತ್ತು ಹಿರಿಯ ಕವಿ ಕೆ. ಸಿ. ಶಿವಪ್ಪ ಸರ್ ಅವರ ಒಲವ ಬೆನ್ನುಡಿ ಕೃತಿಗೆ ಸಿರಿಭೂತಿಯ ಚೆಂಬೆಳಕು. ○

ಕವನ

## ಬಾಳ ಹೊಂಗಿರಣ

– ಪ್ರಮೋದ ಎಸ್. ಮಾಡ,
ಶಿಕ್ಷಕಿ, ಥಾಣೆ

ಕಣ್ಣುಗಳಲ್ಲಿ ಬಣ್ಣ ಬಣ್ಣದ ಕನಸುಗಳಿತ್ತು
ಕುಣಿದು ಕುಪ್ಪಳಿಸುವ ಬಯಕೆಗಳು ಅರಳಿತ್ತು
ಶೃಂಗಾರವಿಲ್ಲದ ಅಪರೂಪದ ಸೌಂದರ್ಯವಿತ್ತು
ಅವಳ ಬದುಕಲ್ಲಿ ಮಾತ್ರ ಕಡು ಬಡತನವಿತ್ತು

ಅವಳ ನೋಡಿ ಕಣ್ಣೀರು ಮಿಡಿಯುತಿತ್ತು
ಬಡತನದ ಬೇಗೆಯಿಂದ ಹೊರತರಬೇಕೆಂಬ ಹಠವಿತ್ತು
ನಾ ಕಂಡೆ ಆನಂದಬಾಷ್ಪ ಅವಳ ಕಣ್ಣಲ್ಲಿ
ಅವಳಾದಳು ನನ್ನ ದೇವತೆ ಹೃದಯ ಗುಡಿಯಲ್ಲಿ

ಬಾಡಿರುವ ಫಸಲಿಗೆ ಮಳೆಹನಿಯ ಸಿಂಚನವಾದೆ
ನುಚ್ಚು ನೂರಾಗುವ ಕನಸುಗಳಿಗೆ ಭರವಸೆಯ ತುಂಬಿದೆ
ನಗುತ್ತಿದ್ದನು ಭಾಸ್ಕರನು ಮೂಡಣದ ಪೂರ್ವದಲಿ
ಮುಂಜಾವ ಹೊಂಗಿರಣ ಬೀರಿದನು ನಮ್ಮ ಬಾಳಿನಲಿ

○○○

# ಶ್ರೀ ರಾಮ ಎಂದರೆ ಪಾವನಕೆ ಪಾವನ, ಮಂಗಳಕೆ ಮಂಗಳ

✍ ಡಾ. ಪ್ರದೀಪ್ ಕುಮಾರ್ ಹೆಬ್ರಿ, ಮಂಡ್ಯ

'ಶ್ರೀರಾಮ' ಹೆಸರೇ ನಮಗೆಲ್ಲ ಸಂತೋಷ, ಸ್ಫೂರ್ತಿ. ನಮಗಿದನ್ನು ವಾಲ್ಮೀಕಿ ರಾಮಾಯಣ ಪರಿಚಯಿಸಿದೆ. ಒಮ್ಮೆ ವಾಲ್ಮೀಕಿ ಮಹರ್ಷಿಗಳು ಮತ್ತು ಮಹರ್ಷಿ ನಾರದರು ಭೇಟಿಯಾಗುತ್ತಾರೆ. ಆಗ ವಾಲ್ಮೀಕಿ ಮಹರ್ಷಿಗಳು ನಾರದರಲ್ಲಿ ಹತ್ತಿಪ್ಪತ್ತು ಗುಣಗಳನ್ನು ಉಲ್ಲೇಖಿಸಿ, ಕೊನೆಗೆ ಇಂತಹ ಗುಣಗಳುಳ್ಳ ವ್ಯಕ್ತಿ ಸಮಾಜದಲ್ಲಿ ಯಾರಾದರೂ ಇದ್ದಾರೆಯೇ ಕೇಳಿದಾಗ ಮಹರ್ಷಿ ನಾರದರು ಆ ಹತ್ತಿಪ್ಪತ್ತು ಗುಣಗಳಿಗೆ ಮತ್ತೊಂದಷ್ಟು ಸೇರಿಸಿ. ಇಷ್ಟೆಲ್ಲ ಗುಣಗಳನ್ನುಳ್ಳ ವ್ಯಕ್ತಿ ಇಂದಿನ ಸಮಾಜದಲ್ಲಿ ಯಾರಾದರೂ ಇದ್ದರೆ ಅದು ಶ್ರೀರಾಮಚಂದ್ರ ಮಾತ್ರ ಎನ್ನುತ್ತಾರೆ.

ಮಹರ್ಷಿ ನಾರದರು ವರ್ಣಿಸಿದ ಶ್ರೀರಾಮಚಂದ್ರನ ಸರ್ವತೋಮುಖ ವ್ಯಕ್ತಿತ್ವದ ದರ್ಶನ ಸುಖ ಅನುಭವಿಸೋಣ. 'ಶ್ರೀರಾಮ ಗುಣವಂತ, ವಿನಯವಂತ, ವೀರ್ಯವಂತ. ಧರ್ಮಜ್ಞ, ಕೃತಜ್ಞ, ಸತ್ಯವಾಕ್ಯ ಪರಿಪಾಲಕ, ದೃಢವ್ರತ, ಚಾರಿತ್ರ್ಯ ಸಂಪನ್ನ, ವಿದ್ವಾಂಸ, ಸಮರ್ಥ, ಆತ್ಮವಂತ, ಜಿತಕ್ರೋಧ, ದ್ಯುತಿಮಂತ, ಅನಸೂಯಕ, ಜನಶ್ರುತ, ನಿಯತಾತ್ಮ, ಧೃತಿಮಂತ, ವಶಿ, ಬುದ್ಧಿವಂತ, ನೀತಿವಂತ, ವಾಗ್ಮಿ, ಸಿರಿವಂತ, ಶತ್ರುಮಾರಕ, ಮಹಾಬಾಹು, ಕಂಬುಗ್ರೀವ, ಮಹಾಹ, ಮಹಾಧನ, ಅರಿಂದಮ, ಅಜಾನುಬಾಹು, ಸುಶರೀರಿ, ವಿಕ್ರಮ, ಸಮಗಾತ್ರ, ಸ್ನಿಗ್ಧ ವರ್ಣ, ಪ್ರತಾಪಶಾಲಿ, ವಿಶಾಲಾಕ್ಷ, ಲಕ್ಷ್ಮೀವಂತ, ಧರ್ಮಜ್ಞ, ಸತ್ಯಸಂಧ, ಪ್ರಜಾ ಹಿತರತ, ಸುಜ್ಞಾನ ಸಂಪನ್ನ, ದಾತಾರ, ನೇತಾರ, ರಿಪುಸೂದನ, ರಕ್ಷಕ, ವೇದವೇದಾಂಗತತ್ವಧಾರಿ, ಧನುರ್ವೇದ ನಿಪುಣ. ಸಮಶಾಸ್ತ್ರಾಸ್ತ್ರ ತತ್ವಜ್ಞ, ಸ್ಥಿತಿವಂತ, ಪ್ರತಿಭಾವಂತ, ಸರ್ವಲೋಕಪ್ರಿಯ, ಸಾಧು, ಅಧೀನಾತ್ಮ, ವಿಚಕ್ಷಣೆ, ಆರ್ಯ, ಸರ್ವ ಸಮಭಾವಿ, ಸರ್ವಗುಣ ಸಂಪನ್ನ, ಕೌಸಲ್ಯಾನಂದ ವರ್ಧನ, ಗಂಭೀರ, ಧೀರ, ವಿಷ್ಣು ಸದೃಶ, ಪ್ರಿಯದರ್ಶನ, ಕಾಲಾಗ್ನಿಸದೃಶ, ಕ್ಷಮಯಾ ಧರಿತ್ರಿ....

ವಾಲ್ಮೀಕಿ ಮಹರ್ಷಿಗಳು ವರ್ಣಿಸಿದ ಹಾಗೂ ನಾರದರು ಬಣ್ಣಿಸಿದ ಶ್ರೀರಾಮಚಂದ್ರನ ಆದರ್ಶ ವ್ಯಕ್ತಿತ್ವದಿಂದ ನಮಗೆ ಶ್ರೀರಾಮನ ದಿವ್ಯಾವತಾರದ ಪರಿಚಯವಾಗುತ್ತದೆ. ಶ್ರೀರಾಮನಿಗೆ ತದ್ವಿರುದ್ಧ ವ್ಯಕ್ತಿತ್ವ ಹೊಂದಿದ್ದ ರಾವಣ ದುರ್ಗುಣಗಳ ಪ್ರತೀಕ. ವಾಲ್ಮೀಕಿ, ನಾರದರು ಶ್ರೀರಾಮ-ರಾವಣರ ಜೀವನ ಚರಿತ್ರೆ ನಮಗೆ ತಿಳಿಸುವ ಮೂಲಕ ಸಮಾಜದಲ್ಲಿ ನಾವು ಹೇಗೆ ಇರಬೇಕು ಎಂಬುದನ್ನು ತಿಳಿಸಿದ್ದಾರೆ. ನಾವು ಶ್ರೀರಾಮನಂತೆ ಇರಬೇಕೇ ವಿನಃ ರಾವಣನಂತಲ್ಲ. ಶ್ರೀರಾಮಚಂದ್ರ ತನ್ನ ಬದುಕಿನುದ್ದಕ್ಕೂ ಸಮಾಜದ ಸುಖಕ್ಕೋಸ್ಕರ ತನ್ನ ಸುಖ ಸಂತೋಷಗಳನ್ನು ಕಡೆಗಣಿಸಿ ಶ್ರಮಿಸಿದ ಮಹಾ ನೇತಾರ. ಆದರೆ ರಾವಣನು ಲೋಕದಲ್ಲಿರುವ ಎಲ್ಲ ಒಳ್ಳೆಯ ಹೆಸರು, ಸೊತ್ತುಗಳೆಲ್ಲವೂ ತನಗೇ ಬೇಕು ಎಂಬಂತೆ ವರ್ತಿಸಿ ಸಮಾಜದ ನಿರಂತರ ಕಷ್ಟ ದುಃಖಕ್ಕೆ ಕಾರಣನಾದ. 'ರಾಮ' ಎಂಬ ಶಬ್ದಕ್ಕೆ ಅರ್ಥ ಕಷ್ಟಗಳ ತಾನುಂಡು ಸಮಾಜಕ್ಕೆ ಸುಖ ಸಂತೋಷವನ್ನು ಕೊಟ್ಟವನು. 'ರಾವಣ' ಎಂಬ ಶಬ್ದಕ್ಕೆ ಸುಖವನ್ನು ತಾನುಂಡು ಸಮಾಜಕ್ಕೆ ಕಷ್ಟ ದುಃಖವನ್ನು ಕೊಟ್ಟವನೆಂದು!

'ಶ್ರೀರಾಮ' ನಾಮಸ್ಮರಣೆ ಎಂದರೆ ನಮ್ಮೆಲ್ಲ ಅಂಗಾಂಗ ಹಾಗೂ ಇಂದ್ರಿಯಗಳ ಜೊತೆಗೆ ಅವೆಲ್ಲವನ್ನೂ ಮೀರಿದ ಒಂದು ಅಂತರ್ ಇಂದ್ರಿಯದ ಸಂವೇದನೆಗೆ ಗುದ್ದಲಿ ಪೂಜೆ. ಇದರಿಂದ ಮನುಷ್ಯ ಚೇತನಕ್ಕೆ ದಿವ್ಯತ್ವ, ಬಾಳಿನಲ್ಲಿ ಹೊಸ ಹಸಿವೆ, ಹೊಸರುಚಿಯ ಆಸ್ವಾದನೆಗೆ ಅವಕಾಶ. ರಾಕ್ಷಸರನ್ನು ರಕ್ಷಕನನ್ನಾಗಿಸುವ ಮಹಾತ್ಕಾರ್ಯ ಇದರಿಂದ ಸಾಧ್ಯ. ನಮ್ಮೆಲ್ಲರ ಬದುಕು ಲೌಕಿಕ ವಾಸನೆಗೆ ಮನಸೋತು ಕೆಟ್ಟಿರುವಂತೆ ಕಂಡಿದ್ದರೂ ಪೂರ್ವಿಕರ ಪುಣ್ಯದ ತಪೋಪ್ರಭಾವದ ನಂದಾದೀಪ ನಂದದೆ ಬೆಳಗುತ್ತಿದೆ. ಈ ಬೆಳಗುವಿಕೆಗೆ ಆಶೀರ್ವಾದ ಶಕ್ತಿಯು ರೂಪದಲ್ಲಿ ನೆರವಾಗುವುದೇ ಶ್ರೀರಾಮ ಸ್ಮರಣೆ.

ಶ್ರೀರಾಮಚಂದ್ರ ನಮ್ಮ ಆದರ್ಶ ಎಂಬುದಕ್ಕೆ ನಿದರ್ಶನ ಇಂತಿದೆ. ರಾಮಾಯಣದ ಕೊನೆಯ ಪ್ರಸಂಗ, ಲಂಕಾಧಿಪತಿ ರಾವಣನ ಸಂಹಾರವಾಗಿದೆ. ರಾಮ, ಲಕ್ಷ್ಮಣ, ಸೀತೆಯರು ಅಯೋಧ್ಯೆಗೆ ಹೊರಡಲು ಸಿದ್ಧರಾಗುತ್ತಿದ್ದಾರೆ. ಆಗ ಲಕ್ಷ್ಮಣನು ಶ್ರೀರಾಮನಲ್ಲಿ ' ಅಣ್ಣ, ನಾವು ಅಯೋಧ್ಯೆಗೆ ಹೋಗುವುದು ಬೇಡ, ರಾವಣನ ಸಂಹಾರವಾಗಿದೆ. ಲಂಕೆಯಲ್ಲೇ

ನಾವಿರೋಣ. ಲಂಕೆಯನ್ನೇ ರಾಜಧಾನಿ ಆಗಿಸಿಕೊಂಡು ರಾಜ್ಯಭಾರ ಮಾಡೋಣ' ಎಂದಾಗ ಶ್ರೀರಾಮ ಇಂತೆಂದ. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪೀ ಗರೀಯಸಿ' ಈ ಲಂಕೆ ಸುವರ್ಣಮಯಿ ಆಗಿದ್ದು ಸ್ವರ್ಗದಂತಿರಬಹುದು. ಆದರೆ ನನಗಿದು ಇಷ್ಟವಿಲ್ಲ. ಮಾತೆಯ ಕುರಿತು, ಮಾತೃಭೂಮಿಯ ಕುರಿತು ಸ್ವರ್ಗಕ್ಕೂ ಮಿಗಿಲಾದ ಪ್ರೀತಿ ಇರಬೇಕು. ನನ್ನೆದುರು ಮಾತೃಭೂಮಿ ಬೇಕೋ, ಸ್ವರ್ಗ ಬೇಕೋ ಎಂಬೆರಡು ಆಯ್ಕೆ ಇಟ್ಟರೆ, ನಾನು ಮಾತೃಭೂಮಿಯನ್ನೇ ಆಯ್ಕೆ ಮಾಡಿಕೊಳ್ಳುವೆ' ಎಂದನು. ಇಂತಹ ಶ್ರೀರಾಮನನ್ನು ಪ್ರೀತಿಸುವುದು, ಆರಾಧಿಸುವುದು ನಮ್ಮೆಲ್ಲರ ಆದ್ಯಕರ್ತವ್ಯವಾಗಿರಲಿ.

ಶ್ರೀರಾಮನ ಭಕ್ತರಾಗುವ ಆಶಯದ ನಾವೆಲ್ಲರೂ ಮೊದಲು ನಮ್ಮ ದೇಶವನ್ನು ಪ್ರೀತಿಸಬೇಕು, ದೇಶಪ್ರೇಮಿಗಳಾಗಬೇಕು. ದೇಶ ಸೇವಕರೆನಿಸಬೇಕು. ದೇಶಸೇವೆ ಮಾಡಿದರದು ರಾಮಸೇವೆ ಮಾಡಿದಂತೆ. ಪ್ರಜೆಗಳ ಸಂತೋಷದಲ್ಲಿ ತನ್ನ ಸಂತೋಷವನ್ನು ಕಾಣುವ ಶ್ರೀರಾಮನ ಒಂದೊಂದು ಗುಣವನ್ನು ನಾವು ಜೀವನದಲ್ಲಿ ಪಾಲಿಸಿಕೊಂಡು ಕಾರ್ಯಪ್ರವೃತ್ತರಾಗೋಣ. ನಾವೆಲ್ಲ ಸ್ವಾರ್ಥರಹಿತರಾಗಿ, ನಿಷ್ಕಳಂಕತೆಯಿಂದ ಪರೋಪಕಾರವನ್ನೇ ಬದುಕ ಧರ್ಮವಾಗಿರಿಸಿ ದೇಶಸೇವೆಗೆ ಮುಂದಾದರೆ ಅದೇ ಶ್ರೀರಾಮನಿಗೆ ನಾವು ತೋರುವ ಪ್ರೀತಿ, ನೀಡುವ ಕಾಣಿಕೆ. ನಮ್ಮ ಸುತ್ತಮುತ್ತಲು ಕಷ್ಟದಲ್ಲಿರುವವರ, ದುಃಖದಲ್ಲಿರುವವರ, ದೀನದುರ್ಬಲರ ಬದುಕಿಗೆ ಸಾಧ್ಯವಾದಷ್ಟು ನೆರವಾಗಿ ಸೇವೆಗೆ ಮುಂದಾದರೆ ಶ್ರೀರಾಮನೊಪ್ಪುತ್ತಾನೆ, ಹರಸುತ್ತಾನೆ. ನಮ್ಮನ್ನು ಶ್ರೀ ರಾಮರಕ್ಷೆ ಸದಾ ಕಾಯುತ್ತಿರುತ್ತದೆ. ಶ್ರೀರಾಮನ ಶುಭ ಹಾರೈಕೆಯ ಬಲದಿಂದ ನಾವೆಲ್ಲರೂ ಬದುಕ ಉನ್ನತಿಗೆ ಪ್ರೇರಕವಾಗುವ ಸಾತ್ವಿಕ ಸಂಪತ್ತಿನ ಒಡೆಯರಾಗುತ್ತೇವೆ.

ನಮ್ಮೆದೆಯಲ್ಲಿನ ಕತ್ತಲನ್ನು, ಕರಾಳತೆಯನ್ನು ಇಲ್ಲವಾಗಿಸಲು ಊರ ತುಂಬ ಹಣತೆ ಬೇಡ. ಶ್ರೀರಾಮ ಒಬ್ಬ ಸಾಕು. ಶ್ರೀರಾಮನೇ ಪೂರ್ಣ ಚಂದಿರ. ಶ್ರೀರಾಮನೇ ಆನಂದ ಮಂದಿರ, ಶ್ರೀರಾಮನೇ ಸರ್ವಗುಣ ಸಾಗರ.

ಶ್ರೀರಾಮ ಜಯರಾಮ ಜಯ ಜಯ ರಾಮ. ❍

ಕವನ

# ಗಝಲ್

**- ಗಣೇಶ ಪ್ರಸಾದ ಪಾಂಡೇಲು**

ಬಳಗ ಸೇರುತ ಜತೆಯಲಿ ಸಾಗುತ ಭಾವ
ಕರೆಯಬಹುದು ನಾವು
ಒಳಗೆ ಕೂತಿಹ ವೇದನೆ ನೀಗುತ ಹೊಸತು
ಬರೆಯಬಹುದು ನಾವು

ಅಳಿಸಿ ನೋವು ಇಡಲು ಹೆಜ್ಜೆಯ ನೆಮ್ಮದಿ
ಸಿಗದಿಹುದೇ ಹೇಳು
ಉಳಿಸಿ ನಂಬಿಕೆ ಮುಟ್ಟಲು ಎದೆಯ ಒಳಿತು
ಎರೆಯಬಹುದು ನಾವು

ಬಳಸಿ ಸಂಗವ ಕಟ್ಟುತ ಸಂಘವ ಮಾದರಿ
ಆಗುವುದಿನಿತು ಖುಷಿ
ಬೆಳೆಸಿ ಸಜ್ಜನ ಕೂಟವ ನಕ್ಕರೆ ಸೌಹಾರ್ದಕೆ
ತೆರೆಯಬಹುದು ನಾವು

ತುಳಿದು ಕೆಡುಕು ಕೋರಲು ಶುಭ ವೃದ್ಧಿಸೀತು
ಸುಸಂಸ್ಕೃತ ಸಮಾಜ
ತೊಳೆದು ಬಣ್ಣವ ಶುಭ್ರತೆ ಪ್ರಕಾಶ ಕಿರಣದಲಿ
ಬೆರೆಯಬಹುದು ನಾವು

ಎಳೆದು ಕೂಗುತ ಹೊಗಳಿಸಿ ಹಾಡುತ ಹಿಗ್ಗಿಸಿ
ಪ್ರಸಾದವನು ಕೇಳದಿರು
ಅಳೆದು ನಿಲ್ಲಲು ಮಿತಿಯ ತಪ್ಪಲು ಮದ್ದನು
ಅರೆಯಬಹುದು ನಾವು

❍❍❍

# ನಿರಾಶ್ರಿತರಿಗೆ ಆಶ್ರಿತ ಖಾರ್‌ಘರ್ 'ಗಿರಿಜಾ ವೆಲ್ಫೇರ್ ಸೆಂಟರ್'

**– ಶ್ರೀಮತಿ ಜ್ಯೋತಿ ಎನ್. ಶೆಟ್ಟಿ, ಜೊತೆ ಕಾರ್ಯದರ್ಶಿ, ಮಹಿಳಾ ವಿಭಾಗ ಥಾಣೆ ಬಂಟ್ಸ್ ಅಸೋಸಿಯೇಶನ್**




'ಏಸು ಕಾಯಂಗಳ ಕಳೆದು 84 ಲಕ್ಷ ಜೀವರಾಶಿಯನ್ನು ದಾಟಿ ಬಂದ ಈ ಶರೀರ' ಇದು ದಾಸವಾಣಿ. ಹೌದು, ಮಾನವ ಜನ್ಮ ಅತ್ಯಮೂಲ್ಯವಾದುದು. ಇನ್ನೊಂದು ಹುಟ್ಟಿಗೆ ಎಷ್ಟು ಜನ್ಮ ಕಾಯಬೇಕೋ ಗೊತ್ತಿಲ್ಲ. ಆದರೆ ಇಂತಹ ನರಜನ್ಮಕ್ಕೆ ಯಾಕಾದರೂ ಬಂದೆವೆಂದು ಪರಿತಪಿಸುವ ಸ್ಥಿತಿ ಎದುರಾದರೇ?

ಇತ್ತೀಚೆಗೆ ನಮ್ಮ ಥಾಣೆ ಬಂಟ್ಸ್ ಅಸೋಸಿಯೇಶನ್‌ನ ಮಹಿಳಾ ವಿಭಾಗದವರು ಎಲ್ಲರ ಸಹಕಾರದಿಂದ, ಮಹಿಳಾ ಕಾರ್ಯಾಧ್ಯಕ್ಷೆ ಶ್ರೀಮತಿ ತಾರಾ ಪ್ರಕಾಶ್ ಶೆಟ್ಟಿಯವರ ನೇತೃತ್ವದೊಂದಿಗೆ (ಸುಮಾರು 21 ಜನ ಸೇರಿ) ಖಾರ್‌ಘರ್ ನಲ್ಲಿರುವ ಗಿರಿಜಾ ವೆಲ್‌ಫೇರ್ ಅಸೋಸಿಯೇಶನ್‌ಗೆ ಭೇಟಿ ನೀಡಿದೆವು. ಅದೊಂದು ಸುಮಾರು ಮಕ್ಕಳು ಹಾಗೂ ಮಹಿಳಾ/ ಪುರುಷ ವಯೋವೃದ್ಧರ ಅನಾಥಾಶ್ರಮ. ಅದರ ಸಂಚಾಲಕರು ನಮ್ಮೂರಿನವರಾದ ಪುತ್ತೂರಿನ ವಸಂತ್ ಕುಂಜಾರು ದಂಪತಿಗಳು ಸುಮಾರು 20 ವರ್ಷಗಳಿಂದ ತನ್ನ ತಾಯಿ ಗಿರಿಜಾ ಕುಂಜಾರ್ ಅವರ ಹೆಸರಿನಲ್ಲಿ ಈ ಆಶ್ರಮವನ್ನು ನಡೆಸುತ್ತಿದ್ದಾರೆ. ಅಲ್ಲಿನ ಅನಾಥ ಮಕ್ಕಳಿಗೆ ತಾಯಿ-ತಂದೆಯಾಗಿ, ವಯೋವೃದ್ಧರಿಗೆ ಬಂಧುವಾಗಿ ಅವರು ಮಾಡುತ್ತಿರುವ ಸೇವೆ ಶ್ಲಾಘನೀಯವಾದುದು. ಬೆಳಿಗ್ಗೆಯಿಂದ ಸಂಜೆಯ ತನಕ ಅಲ್ಲಿಯ ಅನಾಥ ಮಕ್ಕಳು ಹಾಗೂ ವೃದ್ಧರೊಂದಿಗೆ ಕಾಲ ಕಳೆಯುವ, ಮಧ್ಯಾಹ್ನದ ಭೋಜನವನ್ನು ಅವರೊಂದಿಗೆ ಸವಿಯುವ ಸೌಭಾಗ್ಯ ನಮಗೆ ಸಿಕ್ಕಿದ್ದು ನಮ್ಮ ಪುಣ್ಯವೇ ಸರಿ. ಜೊತೆಗೆ ತಿಂಗಳಿಗಾಗುವಷ್ಟು ದವಸ ಧಾನ್ಯಗಳನ್ನು ನೀಡಿ ಮಕ್ಕಳಿಗೆ ಉಡುಗೊರೆಗಳನ್ನು, ಶಾಲಾ ಪರಿಕರಗಳನ್ನು ನೀಡಲಾಯಿತು.

ಅಲ್ಲಿರುವ ಮಕ್ಕಳನ್ನು ನೋಡಿದಾಗ ಅವರು ಅನಾಥರೆನ್ನುವ ಭಾವನೆಯೇ ಬಾರದಿರುವ ವಾತಾವರಣವನ್ನು ಸೃಷ್ಟಿಸಿದ್ದಾರೆ. ಮಕ್ಕಳೆಲ್ಲರೂ ಶಾಲೆಗೆ ಹೋಗುತ್ತಿದ್ದು ಶಾಲಾ ಶಿಕ್ಷಣದೊಂದಿಗೆ ಭಜನೆ ಮುಂತಾದ ಮೌಲ್ಯಯುತ ಸಂಸ್ಕಾರವನ್ನೂ ಕಲಿಸುತ್ತಿದ್ದಾರೆ. ಈ ಮಕ್ಕಳಿಗೆ ಶಿಸ್ತು, ಸಂಯಮವನ್ನು, ಗುರು-ಹಿರಿಯರೊಡನೆ ವ್ಯವಹರಿಸುವ ರೀತಿಯನ್ನು, ಭಗವದ್ಭಕ್ತಿಯನ್ನು ತುಂಬ ಚೆನ್ನಾಗಿ ಕಲಿಸಿದ್ದಾರೆ ಎನ್ನಲು ಸಂತೋಷವಾಗುತ್ತಿದೆ. ಒಬ್ಬೊಬ್ಬರು ಒಂದೊಂದು ಕಾರಣದಿಂದಾಗಿ ಅನಿವಾರ್ಯ ವಾಗಿ ಒಂದೆಡೆ ಸೇರಿದರೂ ಅವರಲ್ಲಿ ಸಹೋದರತ್ವ ಎದ್ದು ಕಾಣುತ್ತಿತ್ತು. ಮಕ್ಕಳೇನೋ ಶಾಲೆಗೆ ಹೋಗುತ್ತಾರೆ, ವಿದ್ಯಾವಂತರಾಗಿ ಮುಂದೆ ತಮ್ಮ ಜೀವನದಲ್ಲಿ ತೊಡಗಿಕೊಳ್ಳುತ್ತಾರೆ. ಕೆಲವರು ವಿದ್ಯೆ ಮುಗಿಸಿ ಉದ್ಯೋಗದಲ್ಲಿದ್ದು ಸಂಸಾರಿಯಾಗಲು ಹೊರಟಿದ್ದಾರೆ. ಮುಂದೆ ಜೀವನ ಬೇಕಾದಷ್ಟು ಅವರಿಗಿದೆ. ಆದರೆ ಅಲ್ಲಿಯ ವೃದ್ಧರನ್ನು ನೋಡುವಾಗ ಕಣ್ಣಂಚಿನಲ್ಲಿ ನೀರು ಬಾರದಿರದು.

ಮಾನವನ ಜೀವನದಲ್ಲಿ ಶೈಶವಾವಸ್ಥೆ -ಬಾಲ್ಯ, ಯೌವನ, ವೃದ್ಧಾಪ್ಯ... ಹುಟ್ಟಿದ ಪ್ರತಿಯೊಬ್ಬರೂ ಎದುರಿಸಲೇ ಬೇಕಾಗಿರುವ ವಿವಿಧ ಹಂತಗಳು ಮಕ್ಕಳಾಗಿ, ಅಪ್ಪ-ಅಮ್ಮನಾಗಿ, ಅತ್ತೆ-ಮಾವನಾಗಿ, ಅಜ್ಜ-ಅಜ್ಜಿಯರಾಗಿ, ಸಂಬಂಧಗಳನ್ನು ಗಟ್ಟಿಗೊಳಿಸುವ ಮನೆಯ ಹಿರಿಯರು ಅನಾಥಾಶ್ರಮದಲ್ಲಿದ್ದು ಮಕ್ಕಳ ಕಾಳಜಿ, ಪ್ರೀತಿಗಾಗಿ ಹಪಹಪಿಸುವ ಭೀಕರ ದೃಶ್ಯಗಳನ್ನು ವಿಮರ್ಶಿಸಿದಷ್ಟು ಸೋಜಿಗವೇ. ಮಕ್ಕಳೇ ಸರ್ವಸ್ವವೆಂದು ತಮ್ಮೆಲ್ಲ ಸುಖ-ಸಂತೋಷಗಳನ್ನು ಅವರಿಗಾಗಿ ಧಾರೆಯೆರೆದು ಜತನದಿಂದ ಕಾಪಾಡಿದ ತಾಯಂದಿರನ್ನು ನಿವೃತ್ತಿ ಹೊಂದಿದರೆಂದ ಮಾತ್ರಕ್ಕೆ ಎಲ್ಲ ಸಂಬಂಧಗಳಿಂದ ನಿವೃತ್ತಿ ನೀಡುವುದು ಯಾವ ಸಂಸ್ಕೃತಿ!? ರೆಕ್ಕೆ-ಪುಕ್ಕ ಬಂದ ಮೇಲೆ ಹೆತ್ತವರ ಪಾತ್ರ ಮುಗಿಯಿತೆನ್ನುವ ಭ್ರಮೆಯಲ್ಲಿ, ದೇಹದ ಬೆಳವಣಿಗೆಯ ಕೊನೆಯ ಹಂತದಲ್ಲಿರುವ, ಇಂದ್ರಿಯಗಳ ಸಾಮರ್ಥ್ಯ



ಜಾರಿಗೊಳಿಸದ ಹೊರತು ಹೆಚ್ಚುತ್ತಿರುವ ವೃದ್ಧಾಶ್ರಮಗಳಿಗೆ ಕಡಿವಾಣ ಹಾಕುವುದು ಕಷ್ಟದ ಕೆಲಸ.

ಏನಾದರಾಗಲಿ, 'ಯಾರೂ ಇಲ್ಲದವರಿಗೆ ನಾವಿದ್ದೇವೆ' ಎನ್ನುವ ಭರವಸೆಯೊಂದಿಗೆ ಶ್ರಮಿಸುತ್ತಿರುವ ವಸಂತ ಕುಂಜಾರು ದಂಪತಿಗಳಿಗೆ ಥಾಣೆ ಬಂಟ್ಸ್ ಎಸೋಸಿಯೇಶನ್‌ನ ಪರವಾಗಿ ದೊಡ್ಡ ಸಲಾಂ. ❍

ಕ್ಷೀಣಿಸುತ್ತಿರುವ ಸಮಯದಲ್ಲಿ ಈ ವೃದ್ಧಾಶ್ರಮ ಆ ಹಿರಿಜೀವಕ್ಕೆ ಮನೆಯಾಗಲು ಸಾಧ್ಯವೇ?

'ಮಾತೃದೇವೋಭವ, ಪಿತೃದೇವೋಭವ, ಆಚಾರ್ಯ ದೇವೋಭವ' ಎಂಬ ಸನಾತನ ಸಂಸ್ಕೃತಿಯ ಹಿನ್ನೆಲೆಯಿಂದ ಬಂದವರು ನಾವು ಭಾರತೀಯರು. ತಂದೆ - ತಾಯಿಯನ್ನು, ಗುರು-ಹಿರಿಯರನ್ನು ಪೂಜಿಸುವ, ಗೌರವಾದರಗಳಿಂದ ಕಾಣಬೇಕೆನ್ನುವ ಸಂಸ್ಕಾರವನ್ನು ಕಲಿಸಿದ ತಾಯಿ ತನ್ನ ಜೀವನದ ಸಂಧ್ಯಾಕಾಲವನ್ನು ಅನಾಥಾಶ್ರಮದಲ್ಲಿ ಕಳೆಯುವುದು ಒಳ್ಳೆಯದಲ್ಲ. 'ಮನೆಯೇ ಮೊದಲ ಪಾಠಶಾಲೆ ಜನನೀ ತಾನೇ ಮೊದಲ ಗುರು' ಎಂಬ ಧ್ಯೇಯದೊಂದಿಗೆ ಜೀವನದ ಮೊದಲ ಹೆಜ್ಜೆಯನ್ನು ಕೈಹಿಡಿದು ನಡೆಸುವ ಮಾತೆ ಮುಂದೆ ಹೆತ್ತ ಮಕ್ಕಳಿಗೇ ಭಾರವಾಗುವುದು ಎಷ್ಟರಮಟ್ಟಿಗೆ ಸರಿ?

ಅಲ್ಲಿಯ ವೃದ್ಧ ತಾಯಂದಿರದ್ದು ಒಬ್ಬೊಬ್ಬರದ್ದು ಒಂದೊಂದು ಕಥೆ. ಕಥೆಯಲ್ಲ ಅದು ವ್ಯಥೆ. ಸ್ವಂತ ಮಗಳೇ ತನ್ನೆಲ್ಲ ಒಡವೆ, ಆಸ್ತಿಯನ್ನು ಬರೆಸಿಕೊಂಡು ತನ್ನನ್ನು ಇಲ್ಲಿಗೆ ತಂದು ಹಾಕಿ ಹೋಗಿದ್ದಾಳೆ ಎಂದು ಅಳುತ್ತಿರುವ ಆ ತಾಯಿಯ ಮನಸ್ಥಿತಿಯನ್ನು ಕೇಳಿದಾಗ ನಿಜವಾಗಿಯೂ ಕಷ್ಟವಾಗುತ್ತಿತ್ತು. ಕರುಳ ಬಳ್ಳಿಯ ಕಡಿದು ಹೊರಬಂದ ಮಗಳೇ ಈ ರೀತಿ ಮಾಡುತ್ತಾಳೆಂದರೆ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚದೇ ಇನ್ನೇನು?

ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿರುವುದು ಉತ್ತಮ ಸಮಾಜಕ್ಕೆ ಮಾರಕ. ವೃದ್ಧಾಪ್ಯ ಜೀವನದ ಒಂದು ಪ್ರಮುಖ ಘಟ್ಟವಾಗಿದ್ದು, ವೃದ್ಧಾಶ್ರಮ ಮನೆಯಾಗಲು ಖಂಡಿತ ಸಾಧ್ಯವಿಲ್ಲ. ಕಟ್ಟುನಿಟ್ಟಾದ ಕಾನೂನುಗಳನ್ನು

## ಸಾಹಿತ್ಯದ ಸಿರಿ ಕುಂದಾನಗರಿ

ಕವನ

### ಕಾವ್ಯ ತಪಸ್ವಿ ಹೆಬ್ರಿ

**– ಎಚ್. ಆರ್. ಕನ್ನಿಕ, ಮಂಡ್ಯ**

ಸಾಧನೆಯ ಉತ್ತುಂಗದಲಿ ಸೂರ್ಯನಂತೆ
ಹಮ್ಮುಬಿಮ್ಮುಗಳಿಲ್ಲದ ...
ನಮ್ಮೆಲ್ಲರಿಗೂ ಮಾರ್ಗದರ್ಶನದಂತೆ
ಸಾಮಾನ್ಯರಲ್ಲಿ ಸಾಮಾನ್ಯರಂತ ಪ್ರವರ್ತಕ
ಈ ಕಾವ್ಯ ತಪಸ್ವಿ ಹೆಬ್ರಿ.

ಬರಹಕ್ಕೆ ಬರಗಾಲವಿಲ್ಲ ಎಂದಿಗೂ
ದಾಹವಿಂಗುವುದಿಲ್ಲ
ಸಿರಿಚೈತನ್ಯರು ಸದಾ ಹಸನ್ಮುಖರು ತತ್ವಜ್ಞಾನಿಗಳು
ಅಮೃತದಂತೆ ಮಾತುಗಳು ಅನ್ವಯಿಕ
ಸಾಧನೆದಿವರೇ ಪ್ರೇರಕ ಪ್ರದೀಪಕ
ಈ ಕಾವ್ಯತಪಸ್ವಿ ಹೆಬ್ರಿ.

ಜಾತಿಮತ ಭೇದವಿಲ್ಲದ ನೀತಿವಂತರು
ಎಲ್ಲರ ತಬ್ಬಿಕೊಳ್ಳುವ ಹೃದಯವಂತರು
ಜ್ಞಾನದಾಹಿಗಳು ಮಹಾತಪಸ್ವಿಗಳು
ಮಹಾಕಾವ್ಯಗಳ ದಿಗ್ಗಜರಿವರು
ಈ ಕಾವ್ಯತಪಸ್ವಿ ಹೆಬ್ರಿ.

ಹೊಸ ಷಟ್ಪದಿಯ ಹರಿಕಾರ
ನೇರನುಡಿಯ ಭಾಷಣಕಾರ
ವಿಶ್ವಮಾನ್ಯತೆಯ ಪ್ರದೀಪ ಕುಮಾರ
ಸಾಹಿತ್ಯ ಲೋಕದ ಐನೂರು ಕೃತಿವೀರ
ಈ ಕಾವ್ಯತಪಸ್ವಿ ಹೆಬ್ರಿ.

❍❍❍

*With*
*Best Compliments*
*From :*

*Chandrahas Shetty* (CEO)

**Skytech**
**Systems (India) Pvt. Ltd.**
**&**
**BHARTI ENTERPRISE**

*401, Siddeshwar Arcade, Opp. Suraj Water Park,*
*Ghodbunder Road, Thane (W) - 400 607.*

*Tel. : 022-2597 5110*
*Fax : 022-2597 5116*

*E-mail : shetty@skytechindia.com*
*Website : www.skytechindia.com*

Best Wishes From :
Sunil Alva

UNIQUE EXPRESS

UNIQUE
AIR FREIGHT
EXPRESS
& LOGISTICS PVT. LTD.

2/A, Planet Industrial Estate,
Opp. United Ink, Subhas Road,
Vile Parle (E), Mumbai - 400 057.

Tel : 022-4228 5850/6694 1984
Fax : 022 - 4228 5888
E-mail : customercare@uniqueairfreight.com
BHIWANDI : 97690 11162

A name to remembered for Best, Tasty & Delicious Food

ಶುಚಿ
ರುಚಿಗೆ
ಹೆಸರಾದ
ಮುಂಬಯಿಯ

Laxmj CATERERS
SERVICE WITH SMILE



# ಲಕ್ಷ್ಮೀ ಕೇಟರರ್ಸ್

**South Indian, Punjabi & Chinese Dishes, All types of Catering service available for all occasion.**

**We are the official caterers of :**

- **Buntara Bhavana - Kurla**
- **Manav Seva Sangha - Sion**
- **Vallabh Sangeet Vidyalaya - Sion**
- **Chedda Ngr. Gymkhana - Chembur**
- **S.M. Shetty High School - Powai**

We undertake Outdoor Catering All over Mumbai Assistance in Hall Booking & Allied Matter

SPECIAL DISCOUNT FOR KANNADIGAS

*For Booking Contact* : **SATISH R. SHETTY**
Vallabh Sangeet Vidyalaya (Next to Swami Nityanand Hall),
Ground Floor, Plot No. 6, Road No. 24, Sion (W),
Mumbai - 400 022.
**✆ Off. : 2403 5191 • Mobile : 98211 80002 / 98211 84002**

Advt.

# ಥಾಣೆ ಬಂಟ್ಸ್ ವೈವಾಹಿಕ ಕೇಂದ್ರ



ಸಮಾಜಮುಖಿ ಕಾರ್ಯಗಳಿಗೆ ಸದಾ ಪ್ರಚೋದನೆ ಕೊಡುವ ಥಾಣೆ ಬಂಟ್ಸ್ ಎಸೋಸಿಯೇಶನ್ ಸಮಾಜಬಾಂಧವರಿಗೆ ವೈವಾಹಿಕ ಹೊಂದಾಣಿಕೆ ಮಾಡಿಕೊಳ್ಳಲು ಆಗುತ್ತಿರುವ ತೊಂದರೆಗಳನ್ನು ಮನಗಂಡು ಕಳೆದ ಕೆಲವು ವರ್ಷಗಳಿಂದ ವೈವಾಹಿಕ ಹೊಂದಾಣಿಕೆ ಕೇಂದ್ರವನ್ನು ನಡೆಸುತ್ತಿದೆ. ಸದಸ್ಯ ಬಾಂಧವರು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು.

**ಗೀತಾ ವಸಂತ್ ಶೆಟ್ಟಿ**, ಕಾರ್ಯಾಧ್ಯಕ್ಷರು ಮ್ಯಾರೇಜ್ ಸೆಲ್

**Ph. : 90295 78156**

# ಸದಸ್ಯರ ಗಮನಕ್ಕೆ

ಥಾಣೆ ಬಂಟ್ಸ್ ಎಸೋಸಿಯೇಶನ್ ಮುಖವಾಣಿ ಸ್ನೇಹ ಸೌರಭ ಸಂಘದ ಚಟುವಟಿಕೆಗಳನ್ನು ಸದಸ್ಯರ ಮನೆಬಾಗಿಲಿಗೆ ತಲುಪಿಸುವ ಪ್ರಯತ್ನ. ಇದು ಪ್ರತಿಯೋರ್ವ ಸದಸ್ಯನ ಪತ್ರಿಕೆ. ಇದನ್ನು ಪೋಷಿಸುವುದು, ಬೆಳೆಸುವುದು ನಮ್ಮೆಲ್ಲರ ಕರ್ತವ್ಯ. ಪತ್ರಿಕೆಯ ಸದಸ್ಯನಾಗಿಯೂ, ಜಾಹೀರಾತು ನೀಡಿಯೂ ತಾವು ಸಹಕರಿಸುವಿರೆಂಬ ನಂಬಿಕೆ ನಮಗಿದೆ.

ಸದಸ್ಯರ ಮನೆಯಲ್ಲಿ ಏರ್ಪಡುವ ಮದುವೆ, ನಿಶ್ಚಿತಾರ್ಥ, ಪೂಜೆ-ಪುರಸ್ಕಾರ ಮುಂತಾದ ಶುಭ ಕಾರ್ಯಗಳ ವಿವರಗಳನ್ನು ಸಂಘಕ್ಕೆ ಕಳುಹಿಸಿ, ಅಲ್ಲದೆ ಆತ್ಮೀಯರು ತೀರಿಕೊಂಡಾಗ ಉತ್ತರಕ್ರಿಯೆಯ ವಿವರಗಳನ್ನು ಕಳುಹಿಸಿಕೊಟ್ಟಲ್ಲಿ ಅದನ್ನು ಪ್ರಕಟಿಸುತ್ತೇವೆ. ಆಫೀಸಿನಲ್ಲಿ ನೀವು ನಿಮ್ಮ ಮಕ್ಕಳು ಬಡ್ತಿ, ಕ್ರೀಡಾರಂಗದಲ್ಲಿ ಯಶಸ್ಸು, ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದವರ ವರದಿಗಳನ್ನು ಕಳುಹಿಸಿಕೊಟ್ಟಲ್ಲಿ ಪ್ರಕಟಿಸಲಾಗುವುದು.

ಕಥೆ-ಕವನ, ನಗೆಹನಿ, ವ್ಯಕ್ತಿಪರಿಚಯ, ವಿಮರ್ಶೆ, ವೈಚಾರಿಕ ಲೇಖನ ಕಳುಹಿಸಿಕೊಡಿ. ಪ್ರಕಟಣೆಗೆ ಅರ್ಹವಿದ್ದರೆ ಪ್ರಕಟಿಸುತ್ತೇವೆ. ನಮ್ಮ ನಿಮ್ಮ ಸೃಜನಶೀಲತೆಯ ಪ್ರತಿಬಿಂಬವೇ ಈ "ಸ್ನೇಹ ಸೌರಭ."

**ಸಂಪಾದಕರು**

# ‘ಸ್ನೇಹ ಸೌರಭ’ದ ಸದಸ್ಯರಾಗಿ, ಸ್ನೇಹ ಸೌರಭದಲ್ಲಿ ಜಾಹೀರಾತು ನೀಡಿ ನಮ್ಮೊಡನೆ ಸಹಕರಿಸುವಿರಾ...

‘ಸ್ನೇಹ ಸೌರಭ’ ನಮ್ಮ ಎಸೋಸಿಯೇಶನ್‌ನ ಮುಖವಾಣಿ; ಬಂಟ ಬಾಂಧವರ ನಡುವಿನ ಸ್ನೇಹ ಸೇತುವೆ; ನಮ್ಮ ನಿಮ್ಮೆಲ್ಲರ ನೆಚ್ಚಿನ ಪತ್ರಿಕೆ! ಈ ಪತ್ರಿಕೆಗೆ ಜಾಹೀರಾತು ನೀಡುವುದರ ಮೂಲಕ, ಪತ್ರಿಕೆಯ ಚಂದಾದಾರರಾಗುವ ಮೂಲಕ ಇಂದು ಅಂಕುರಿಸಿರುವ ಪತ್ರಿಕೆಗೆ ಪ್ರೋತ್ಸಾಹದ ನೀರೆರೆಯಿರಿ; ಈ ಅಂಕುರ ಗಿಡವಾಗಿ, ಮರವಾಗಿ ಬೆಳೆದು ‘ಸ್ನೇಹ’ ಹೂ ಬಿಟ್ಟು ತನ್ನ ‘ಸೌರಭ’ವನ್ನು ಎಲ್ಲೆಡೆಗೆ ಹರಡಲು ಸಹಕರಿಸಿರಿ.

## "SNEHA SAURABHA" ADVERTISEMENT TARRIFF

| | Per Issue | Per Year | 2 Years |
|---|---|---|---|
| Back Cover Page | Rs. 5,000/- | Rs. 24,000/- | Rs. 43,000/- |
| Cover Inside Page (Front / Back) | Rs. 4,000/- | Rs. 20,000/- | Rs. 36,000/- |
| Inside Colour Page | Rs. 4,000/- | Rs. 18,000/- | Rs. 32,250/- |
| Full Page | Rs. 3,000/- | Rs. 12,000/- | Rs. 21,500/- |
| Half Page | Rs. 2,000/- | Rs. 9,000/- | Rs. 16,200/- |

## "SNEHA SAURABHA" MEMBERSHIP

| | |
|---|---|
| Life Member | Rs. 500/- |
| Patron | Rs. 1,500/- |
| Grand Patron | Rs. 2,500/- |

## ಥಾಣೆ ಬಂಟ್ಸ್ ಎಸೋಸಿಯೇಶನ್ ಸದಸ್ಯರಾಗಿ ಸಂಸ್ಥೆಯನ್ನು ಬೆಳೆಸಿರಿ
## THANE BUNTS ASSOCIATION

| | | |
|---|---|---|
| Grand Patron | Rs. 5,000/- | (For Couple / Individual) |
| Patron Member | Rs. 2,500/- | (For Couple / Individual) |
| Paramount Member | Rs. 1,000/- | (For Couple / Individual) |
| Life Member | Rs. 500/- | (For Couple / Individual) |

## ವಿಳಾಸ ಬದಲಾದ ಸದಸ್ಯ ಬಾಂಧವರಲ್ಲಿ ವಿನಂತಿ.

ಪ್ರತಿಯೊಬ್ಬ ಸದಸ್ಯನೂ ತನ್ನ ವಿಳಾಸ ಬದಲಾದ ಕೂಡಲೇ ಅದನ್ನು ‘ಥಾಣೆ ಬಂಟ್ಸ್’ನ ಕಛೇರಿಗೆ ತಿಳಿಸಬೇಕು. ನಮ್ಮ ನಿಮ್ಮ ಸಂಪರ್ಕ ಕೇವಲ ಪತ್ರಮುಖೇನ ಅಥವಾ ದೂರಧ್ವನಿ ಮೂಲಕ ಮಾತ್ರ ಸಾಧ್ಯ ಎಂಬುದು ತಮಗೂ ಗೊತ್ತು. ನೀವು ನಿಮ್ಮ ಸರಿಯಾದ ವಿಳಾಸ ಮತ್ತು ಸರಿಯಾದ ದೂರಧ್ವನಿ ಕ್ರಮಾಂಕವನ್ನು ನೀಡದಿದ್ದರೆ ನಿಮ್ಮನ್ನು ಸಂಪರ್ಕಿಸುವುದು ಅಸಾಧ್ಯ. ಪ್ರತಿಸಲ ವಿಳಾಸ ಬದಲಾದ ಕಾರಣ ಅಥವಾ ವಿಳಾಸ ಸರಿಯಿಲ್ಲದ ಕಾರಣ ಕೊರಿಯರ್‌ನಲ್ಲಿ ಕಳುಹಿಸಿದ ನೂರಕ್ಕಿಂತಲೂ ಹೆಚ್ಚು ಪತ್ರಗಳು ಹಿಂದೆ ಬರುತ್ತವೆ. ಇದರಿಂದ ತಮಗೆ ಹಾನಿ; ಸಂಸ್ಥೆಗೂ ಅನಗತ್ಯ ಖರ್ಚು. ಆದುದರಿಂದ ದಯವಿಟ್ಟು ನಿಮ್ಮ ಹಾಗೂ ಸಂಸ್ಥೆಯ ಹಿತವನ್ನು ಗಮನದಲ್ಲಿರಿಸಿ ನಿಮ್ಮ ಸರಿಯಾದ ವಿಳಾಸವನ್ನು ಸಂಘದ ಕಛೇರಿಗೆ ತಿಳಿಸಿರಿ ಅಥವಾ ಕಛೇರಿಯ ಈ ದೂರಧ್ವನಿ ಕ್ರಮಾಂಕದಲ್ಲಿ ಸಂಪರ್ಕಿಸಿರಿ.

# ಥಾಣೆ ಬಂಟ್ಸ್ ಎಸೋಸಿಯೇಶನ್
# THANE BUNTS ASSOCIATION

101, ಜೈಶಂಕರ್ ಕೋ.ಆಪ. ಹೌಸಿಂಗ್ ಸೊಸ್ಶಾಟಿ ಲಿ. ಆಕ್ಸಿಸ್ ಬ್ಯಾಂಕಿನ ಎದುರು,
ಎಲ್.ಬಿ.ಎಸ್. ಮಾರ್ಗ, ಹರಿನಿವಾಸ, ಥಾಣೆ (ಪ)
ಮೊಬೈಲ್ : 7506371586
e-mail : thanebunts@gmail.com / web : www.thanebunts.org


## 'ಸ್ನೇಹ ಸೌರಭ' ದ ಪತ್ರಿಕೆಯ ಸದಸ್ಯತ್ವದ ಅರ್ಜಿ

'ಸ್ನೇಹ ಸೌರಭ' ನಮ್ಮ ಎಸೋಸಿಯೇಶನ್‌ನ ಮುಖವಾಣಿ; ಬಂಟ ಬಾಂಧವರ ನಡುವಿನ ಸ್ನೇಹ ಸೇತುವೆ; ನಮ್ಮ ನಿಮ್ಮೆಲ್ಲರ ನೆಚ್ಚಿನ ದ್ವೈಮಾಸಿಕ ಪತ್ರಿಕೆ! ಪತ್ರಿಕೆಯ ಚಂದಾದಾರರಾಗಿ ಇಂದು ಅಂಕುರಿಸಿರುವ ಪತ್ರಿಕೆಗೆ ಪ್ರೋತ್ಸಾಹದ ನೀರೆರೆಯಿರಿ; ಈ ಅಂಕುರ ಗಿಡವಾಗಿ, ಮರವಾಗಿ ಬೆಳೆದು 'ಸ್ನೇಹ' ದ ಹೂ ಬಿಟ್ಟು ತನ್ನ 'ಸೌರಭ' ವನ್ನು ಎಲ್ಲೆಡೆಗೆ ಹರಡಿಸಲಿ.

| ಸುನೀಲ್ ಜೆ. ಶೆಟ್ಟಿ | ಸುರೇಶ್ ಶೆಟ್ಟಿ, ಕಡಂದಲೆ | ಡಾ. ಕರುಣಾಕರ್ ಶೆಟ್ಟಿ, ಪಣಿಯೂರು |
|---|---|---|
| ಅಧ್ಯಕ್ಷರು | ಕಾರ್ಯಾಧ್ಯಕ್ಷರು | ಪ್ರಧಾನ ಸಂಪಾದಕರು |

---

ಹೆಸರು : ..........................................................................

ವಿಳಾಸ : ..........................................................................

..........................................................................

ಫೋನ್ (ಮೊಬೈಲ್) : ..........................................................................

ಲ್ಯಾಂಡ್‌ಲೈನ್ : ..........................................................................

ಇ-ಮೇಲ್ : ..........................................................................

ಸದಸ್ಯತ್ವ : ಮಹಾಪೋಷಕ ರೂ. 2500, ಪೋಷಕ ರೂ 1500,
ಆಜೀವ ಸದಸ್ಯ ರೂ. 500,

ಸದಸ್ಯತ್ವ ನೋಂದಾಯಿಸಿ
ದವರ ಹೆಸರು : ..........................................................................

---

**ವಿಳಾಸ ಬದಲಾದ ಸದಸ್ಯ ಬಾಂಧವರಲ್ಲಿ ವಿನಂತಿ.**

ಪ್ರತಿಯೊಬ್ಬ ಸದಸ್ಯನೂ ವಿಳಾಸ ಬದಲಾದ ಕೂಡಲೇ ಅದನ್ನು 'ಥಾಣೆ ಬಂಟ್ಸ್' ನ ಕಛೇರಿಗೆ ತಿಳಿಸಬೇಕು.

**ಥಾಣೆ ಬಂಟ್ಸ್ ಎಸೋಸಿಯೇಶನ್‌ನ ಮಹಿಳಾ ವಿಭಾಗದ ಸದಸ್ಯೆಯರು ಖಾರ್‌ಘರ್‌ನ ಅನಾಥಾಶ್ರಮ ‘ಗಿರಿಜಾ ವೆಲ್ಫೇರ್ ಸೆಂಟರ್’ಗೆ ಭೇಟಿ ನೀಡಿದ ಸಂದರ್ಭ**
















**A Multicuisine Restaurant | Indian | Chinese | Continental**
**Vegetarian | Non Vegetarian Dishes**

**Banquet Hall Available (Palm Court / Flurries / Z+ (Function Hall)**
**Capacity of 50 to 500 Guest | Free Wifi | Free Parking**

VIHANG'S INN

Opp. Cine Wonder Mall, Next to Vijay Sales, Ghodbunder Road, Thane (West) 400 607.
Contact : +91 22 5842030 / 41124110 / 41124111 / 41124112.
Email: Vihangkuberhospitality@yahoo.com Web Site : http://www.vihangshinn.co.in

If undelivered
please return to :

THANE BUNTS ASSOCIATION
101, Jai Shankar CHS Ltd.,
Opp. Axis Bank, LBS Marg,
Hari Niwas, Thane (W) - 400602.

DESIGNED & PRINTED AT : NAVIN PRINTERS, MUMBAI - 16 PH.: 24308316 / 24311475 E-mail: nvnprint@gmail.com